ಸಂಪುಟ 01 । ಸಂಚಿಕೆ 65 । ಗುರುವಾರ 15 ಜನವರಿ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

01) ಭಾರತೀಯ ಸೇನಾ ದಿನ

ಪ್ರತಿ ವರ್ಷ ಜನವರಿ 15 ಅನ್ನು ಭಾರತೀಯ ಸೇನಾ ದಿನವೆಂದು ಆಚರಿಸಲಾಗುತ್ತದೆ ಏಕೆಂದರೆ 1949 ರಲ್ಲಿ ಈ ದಿನದಂದು ಫೀಲ್ಡ್ ಮಾರ್ಷಲ್ ಕೊಡಂದೇರ ಎಂ. ಕಾರಿಯಪ್ಪ ಅವರು ಕೊನೆಯ ಬ್ರಿಟಿಷ್ ಕಮಾಂಡರ್-ಇನ್-ಚೀಫ್ ಜನರಲ್ ಸರ್ ಫ್ರಾನ್ಸಿಸ್ ಬುಚರ್ ಅವರಿಂದ ಭಾರತೀಯ ಸೇನೆಯ ಮೊದಲ ಕಮಾಂಡರ್-ಇನ್-ಚೀಫ್ ಆಗಿ ಅಧಿಕಾರ ವಹಿಸಿಕೊಂಡರು.

## ಸುಭಾಷಿತ

ಸಾವು ಎಂಬುದು ಬದುಕಿನ ಬಹುದೊಡ್ಡ ನಷ್ಟವಲ್ಲ.
ಆದರೆ, ನಮ್ಮೊಳಗೆ ನಾವು ಸತ್ತಂತೆ ಇರುವುದು
ನಮಗಾಗುವ ಅತಿ ದೊಡ್ಡ ನಷ್ಟ.

ನಾರ್ಮನ್ ಕಸಿನ್ಸ್

# ಕರ್ನಾಟಕದ ಅಯ್ಯಪ್ಪ ಭಕ್ತರಿಗೆ ಅಡ್ಡಿ

## ಕೇರಳದ ಅಧಿಕಾರಿಗಳಿಗೆ ಕರೆ ಮಾಡಿದ ಸಚಿವ ರಾಮಲಿಂಗಾ ರೆಡ್ಡಿ

**ಬೆಂಗಳೂರು: ಕರ್ನಾಟಕದಿಂದ ಕೇರಳದಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ತೆರಳುವ ಭಕ್ತ-ರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅವರು ಕೇರಳದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.**



ರಾಜ್ಯದಿಂದ ತೆರಳುವ ಅಯ್ಯಪ್ಪ ಸ್ವಾಮಿ ಭಕ್ತರ ವಾಹನಗಳನ್ನು ಕೆಲವು ಕಡೆ ತಡೆದಿರುವ ಹಿನ್ನೆಲೆಯಲ್ಲಿ ಕೇರಳದ ಹಿರಿಯ ಅಧಿಕಾರಿಗಳ ಜೊತೆ ದೂರವಾಣಿ ಮೂಲಕ ಮಾತುಕತೆ ನಡೆಸಿರುವ ರಾಮಲಿಂಗಾ ರೆಡ್ಡಿ ಅವರು ಭಕ್ತಧಿಗಳ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಿರ್ದೇಶನ ನೀಡಿದ್ದಾರೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್‌ಹಾಗೂ ಸಾರಿಗೆ ಇಲಾಖೆ ನಿರ್ದೇಶಕ ರಾಜೇಂದ್ರ ಕಟಾರಿಯ ಸೇರಿದಂತೆ ಮತ್ತಿತರ ಅಧಿಕಾರಿಗಳಿಗೆ ಕೇರಳ ಅಧಿಕಾರಿಗಳ ಜೊತೆಯೂ ಸಂಪರ್ಕ ಸಾಧಿಸುವಂತೆ ಸೂಚನೆ ಕೊಟ್ಟಿದ್ದಾರೆ.


ಸಚಿವರ ಸೂಚನೆ ಮೇರೆಗೆ ರಾಜ್ಯದ ಅಧಿಕಾರಿಗಳ ತಂಡ ರಾಜ್ಯದಿಂದ ಬರುವ ಭಕ್ತರಿಗೆ ಅಡಚಣೆ ಆಗದಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ. ಕೇರಳ ಅಧಿಕಾರಿಗಳ ಜೊತೆ ಅಧಿಕಾರಿಗಳು ಮಾತನಾಡಿದ ವೇಳೆ, ಇಲ್ಲಿನ ಹೈಕೋರ್ಟ್ ನೀಡಿರುವ ನಿರ್ದೇಶನವನ್ನು ಪಾಲನೆ ಮಾಡುತ್ತಿದ್ದೇವೆ. ನ್ಯಾಯಾಲಯ ನೀಡಿರುವ ನಿರ್ದೇಶನದಂತೆ ಆನ್‌ಲೈನ್‌ನಲ್ಲಿ ನೋಂದಾವಣೆ ಆಗಿ ಪ್ರತಿದಿನ ಆಗಮಿಸುವ 4 ಸಾವಿರ ವಾಹನಗಳನ್ನು ಮಾತ್ರ ಪ್ರವೇಶಿಸಲು ಅನುಮತಿ ನೀಡಬೇಕೆಂಬ ನಿಯಮವನ್ನು ಹೈಕೋರ್ಟ್ ಆದೇಶದ ಮೇರೆಗೆ ಪಾಲನೆ ಮಾಡಲಾಗುತ್ತಿದೆ ಎಂದು ಕರ್ನಾಟಕದ ಅಧಿಕಾರಿಗಳಿಗೆ ಕೇರಳ ಸರ್ಕಾರದಿಂದ ಮಾಹಿತಿ ನೀಡಲಾಗಿದೆ.

ನಾವು ಕಟ್ಟುನಿಟ್ಟಾಗಿ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡುತ್ತಿದ್ದೇವೆಯೇ ಹೊರತು, ಇದರಲ್ಲಿ ಯಾರೊಬ್ಬರಿಗೂ ಅನಗತ್ಯವಾಗಿ ತೊಂದರೆ ನೀಡುತ್ತಿಲ್ಲ. ಅಯ್ಯಪ್ಪ ಸ್ವಾಮಿ ಭಕ್ತರ ಬಗ್ಗೆ ನಮಗೆ ಅಪಾರವಾದ ಗೌರವವಿದೆ ಎಂಬ ಮಾಹಿತಿಯನ್ನು ಅಧಿಕಾರಿಗಳು ನೀಡಿದ್ದಾರೆ. ಇನ್‌ಸ್ಟಾಗ್ರಾಮ್ ಮಾರ್ಕೆಟಿಂಗ್ ಸಲಕರಣೆಗಳು ನ್ಯಾಯಾಲಯದ ನಿರ್ದೇಶನ ಪಾಲನೆ ಮಾಡುವುದರ ಜೊತೆಗೆ ಆಗಮಿಸುವ ಭಕ್ತರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿರುವ ಸಚಿವ ರಾಮಲಿಂಗಾ ರೆಡ್ಡಿ ಅವರು, ಅಯ್ಯಪ್ಪ ಸ್ವಾಮಿ ಭಕ್ತರು ಅನಗತ್ಯವಾಗಿ ಗೊಂದಲಗಳಿಗೆ ಕಿವಿಗೊಡಬಾರದು. ಅಲ್ಲಿನ ಸರ್ಕಾರ

## ಸಚಿವ ಶಿವಾನಂದ ಪಾಟೀಲಗೆ ಗೌರವ ಸನ್ಮಾನ

❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ಇತ್ತೀಚಿಗೆ ನಡೆದ ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಸಕ್ಕರೆ ಜವಳಿ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಇವರನ್ನು ಆಡಳಿತ ಮಂಡಳಿಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.**



ಪೂಜ್ಯ ಇಂಗಳೇಶ್ವರ ಸ್ವಾಮೀಜಿ,ಶ್ರೀ ಸಿದ್ದಲಿಂಗ ದೇವರು, ಶಾಸಕ, ಕೆ.ಎಸ್.ಡಿ.ಎಲ್.ಅಧ್ಯಕ್ಷರಾದ ಸಿ.ಎಸ್. ನಾಡಗೌಡ(ಅಪ್ಪಾಜಿ), ಡಿಸಿಸಿ ಬ್ಯಾಂಕ ನಿರ್ದೇಶಕ ಬಿ.ಎಸ್.ಪಾಟೀಲ ಯಾಳಗಿ,ವಿ.ವಿ.ಸಂಘದ ಅಧ್ಯಕ್ಷ ವಿ.ಸಿ.ಹಿರೇಮಠ, ಮು-ರಿಗೆಪ್ಪ ಸರಶಟ್ಟಿ, ಅಶೋಕ ಜಾಲವಾದಿ,ಸಹಕಾರಿ ಸಂಘದ ಅಧ್ಯಕ್ಷ ಕಾಶಿನಾಥ ಮುರಾಳ, ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರ ಸಂಘದ ಸದಸ್ಯರು ಹಾಗೂ ಗಣ್ಯರು ಉಪಸ್ಥಿತರಿದ್ದರು.

# ಗ್ರಂಥಾಲಯಗಳು ಜ್ಞಾನದ ಭಂಡಾರ ಸಂಸ್ಕೃತಿಯ ಕಳಸ ಡಾ.ಮಾನಸ



❏ ನೈಜ್ಯ ದೆಸೆ ನ್ಯೂಸ್

**ಕನ್ನಡ ಪುಸ್ತಕ ಪ್ರಾಧಿಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿ ಮನೆಗೊಂದು ಗ್ರಂಥ-ಾಲಯ ಕನಿಷ್ಠ ಒಂದು ಲಕ್ಷ ಮನೆಗಳಲ್ಲಿ ಮನೆಗೊಂದು ಗ್ರಂಥಾಲಯ ನಿರ್ಮಿಸುವ ಗುರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರವು ಹೊಂದಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಮಾನಸ ಅಭಿಪ್ರಾಯ ಪಟ್ಟರು.**

ಸಿಂಧನೂರಿನ ಸಾಹಿತಿ ಶಂಕರ ದೇವರು ಹಿರೇಮಠ ಅವರ ಮನೆಯಲ್ಲಿ ಮನೆಗೊಂದು ಗ್ರಂಥಾಲಯ ಕಾರ್ಯಕ್ರಮದ ಅಡಿಯಲ್ಲಿ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಂಕರ ದೇವರು ಹಿರೇಮಠ ಉತ್ತಮವಾದ ಅಮೂಲ್ಯವಾದ ಪುಸ್ತಕಗಳನ್ನು ಒಳಗೊಂಡ ಗ್ರಂಥಾಲಯವನ್ನು ನಿರ್ಮಿಸಿಕೊಂಡಿದ್ದಾರೆ. ಓದುವ ಅಭಿವೃದ್ಧಿ ಒಂದೇ ಸಾಹಿತ್ಯ ರಚನೆಯಲ್ಲಿ ತಮ್ಮ ಪ್ರೌಢಮೆಯನ್ನು ಹೊಂದಿದ್ದಾರೆ. ಇವರ ಮನೆಯಲ್ಲಿ ಗ್ರಂಥಾಲಯ ಅಪರೂಪದ ಪುಸ್ತಕಗಳನ್ನು ಒಳಗೊಂಡಿವೆ. ನಾವು ಮನೆಕಟ್ಟಿ ವಾಸಿಸುವಾಗ ಅಲ್ಲೊಂದು ಪೂಜೆ ಮನೆ ಇರಬೇಕು ಅದು ನಮಗೆ ನೆಮ್ಮದಿಯ ತಾಣ ಎಂದು ನಾವು ಭಾವಿಸುತ್ತೇವೆ. ಅದೇ ರೀತಿಯಲ್ಲಿ ಪ್ರತಿಮನೆಯಲ್ಲೂ ಸಹ ಒಂದು ಪುಟ್ಟ ಗ್ರಂಥಾಲಯ ಇರಬೇಕು.

ಗ್ರಂಥಾಲಯ ಎಂದರೆ ಅದೊಂದು ಕೇವಲ ಪುಸ್ತಕಗಳ ಮಳಿಗೆಯಲ್ಲ. ಗ್ರಂಥ-ಾಲಯವು ದೇಹದ ಆತ್ಮದಂತೆ ನಮ್ಮ ಮನೆ ಎಂಬ ದೇವಾಲಯದ ಜ್ಞಾನ ಸಂಸ್ಕೃತಿಯ ಕಳಸ. ಪ್ರತಿಯೊಂದು ಮನೆಯಲ್ಲೂ ಗ್ರಂಥಾಲಯಗಳನ್ನು ನಾವು ನಿರ್ಮಿಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ: ಸಾಹಿತಿಗಳಾದ ಶಂಕರ ದೇವರು ಹಿರೇಮಠ, ಕರಿಬಸಯ್ಯಸ್ವಾಮಿ ಹಿರೇಮಠ, ಭಾರತಿ ತಿವಾರಿ, ಸಾವಿತ್ರಿ ದೀಕ್ಷಿತ್, ಮೌಲಪ್ಪ ಮಾಡಸಿರವಾರ, ಪಂಪಯ್ಯಸ್ವಾಮಿ ಸಾಲಿಮಠ, ಜಿಲ್ಲಾ ಪ್ರತಿನಿಧಿಗಳಾದ ಗುಂಡೂರಾವ್ ದೇಸಾಯಿ, ವೆಂಕನಗೌಡ ವಟಗಲ್, ರಾಜಶೇಖರ್, ಸೇ-ರಿದಂತೆ ಅನೇಕರು ಉಪಸ್ಥಿತರಿದ್ದರು.

## ಗ್ರಾಪಂಯಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ



❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ ತಾಲೂಕಿನ ಹಾಲಾಪೂರ ಗ್ರಾಮ ಪಂಚಾಯತಿಯಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮ ಮಾಡಲಾಯಿತು.**

12ನೇ ಶತಮಾನದ ಅನೇಕ ವಚನಕಾರರು, ಶರಣರಲ್ಲಿ ಒಬ್ಬರಾದ ಶ್ರೀ ಶಿವಯೋಗಿ ಕರ್ಮಯೋಗಿ ಸಿದ್ದರಾಮೇಶ್ವರರು ಕೆಲಸವೇ ದೇವರು ಎಂಬ ತತ್ವವನ್ನು ನಂಬಿದ ಅಪ್ರಥಮ ಪುರುಷರು ಇವರು ಸಮಾಜ ಸೇವೆಯಲ್ಲಿ ಸದಾ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಸಮಾಜದ ಜನತೆಗೆ ಅನೇಕ ಕೆರೆಕಟ್ಟೆಗಳನ್ನು ನಿರ್ಮಿಸಿ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಳನ್ನು ರೂಪಿಸಿದ ಕೀರ್ತಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರರು ಇಂಥಹ ಪುರುಷರ ಜಯಂತಿ ಸಮಾಜಕ್ಕೆ ಆದ-ರ್ಶ. ಈ ಸಂದರ್ಭದಲ್ಲಿ ಕಾರ್ಯದರ್ಶಿ ಪರಣ್ಣ ಪಾಮನಕಲ್ಲೂರು, ಕಂಪ್ಯೂಟರ್ ಆಪರೇಟರ ರಂಗಪ್ಪ ಹಾಗೂ ಗ್ರಾಮಸ್ಥರು, ಸಿಬ್ಬಂದಿ ವರ್ಗದವರು ಇದ್ದರು.

## ಹಾಲಾಪೂರ: ಶ್ರೀ ಶಿವಯೋಗಿ, ಕರ್ಮಯೋಗಿ ಸಿದ್ದರಾಮೇಶ್ವರ ಜಯಂತಿ

❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ ಸಮೀಪ ಹಾಲಾಪೂರದಲ್ಲಿರುವ ಶ್ರೀ ಸಿದ್ದರಾಮೇಶ್ವರ ಜಯಂತಿ ಅಂಗವಾಗಿ ಮೂರ್ತಿಗೆ ಪೂಜಾ ಕಾರ್ಯಕ್ರಮ ನಡೆಯಿತು.**



ಶ್ರೀ ಸಿದ್ದರಾಮೇಶ್ವರ ಇವರು ಕರ್ಮ ಯೋಗಿಯಾಗಿ ಶಿವಯೋಗಿಯಾಗಿ 12ನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು, ಸಮಾಜದಲ್ಲಿ ಸಮಾನತೆ, ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದರು ತಮ್ಮ ವಚನಗಳಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನ ಅಂಕಿತ ನಾಮದಿಂದ ಪ್ರಸಿದ್ಧಿ ಪಡೆದಿದ್ದರು ಇವರು ಸೊನ್ನಲಿಗೆಯನ್ನು ತಮ್ಮ ಕರ್ಮ ಕ್ಷೇತ್ರವನ್ನಾಗಿ ಮಾಡಿಕೊಂಡು ಸಮಾಜಕ್ಕೆ ಅತ್ಯುತ್ತಮ ಸೇವೆಯನ್ನ ಕೊಟ್ಟಿರುವ ಶ್ರೇಷ್ಠ ಮಹಾನ್ ಪುರುಷರು ಆಗಿದ್ದರು ಇಂಥಹ ಮಹಾನ್ ಪುರುಷರ ಜಯಂತಿ ಆಚರಣೆ ನಡೆಯಿತು. ಈ ಸಂದರ್ಭದಲ್ಲಿ ಕರಿಯಪ್ಪ ಬೊವಿ, ಆದಯ್ಯ ಸ್ವಾಮಿ, ರಂಗಪ್ಪ ಬೋವಿ, ಬಸೆಟ್ಟಪ್ಪ ಗುತ್ತೇದಾರ್, ಹನುಮಂತ ಬೋವಿ, ನಾಗರಾಜ್ ಫೋಟೋಗ್ರಾಫರ್, ಮಲ್ಲಪ್ಪ ಹಾಗೂ ಇನ್ನಿತರ ಇದ್ದರು.

# ಇದೇ ತಿಂಗಳ 22 ರಿಂದ 31 ರವರೆಗೆ ವಿಧಾನಮಂಡಲದ ಜಂಟಿ ಅಧಿವೇಶನ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಪ್ರಸಕ್ತ ಸಾಲಿನ ವರ್ಷದ ಮೊದಲ ವಿಧಾನಮಂಡಲದ ಜಂಟಿ ಅಧಿವೇಶನ ಇದೇ ತಿಂಗಳ 22 ರಿಂದ 31 ರವರೆಗೆ ನಡೆಸಲು ರಾಜ್ಯಸರ್ಕಾರ ತೀರ್ಮಾನಿಸಿದೆ. ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ತುರ್ತು ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.**



ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿ ನಡೆಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಇದೇ ತಿಂಗಳ 22 ರಿಂದ 31 ರವರೆಗೆ ವರ್ಷದ ಮೊದಲ ಜಂಟಿ ಅಧಿವೇಶನವನ್ನು ನಡೆಸಲು ಉದ್ದೇಶಿಸಲಾಗಿದೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು 22 ರಂದು ವಿಧಾನಮಂಡಲದ ಎರಡು ಸದನಗಳ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.ಮೊದಲು ಕೇಂದ್ರ ಸರ್ಕಾರದ ಉದ್ದೇಶಿತ ವಿಕಸಿತ ಭಾರತ ? ರೋಜ್ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಖಾತರಿ ಕಾಯ್ದೆ-2025 ತಿದ್ದುಪಡಿ ಕುರಿತು ಚರ್ಚಿಸಲು ಕೇವಲ ಮೂರು ದಿನ ಮಾತ್ರ ಅಧಿವೇಶನ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಸಚಿವ ಸಂಪುಟ ಸಭೆಯಲ್ಲಿ ಕೆಲವು ಶಾಸಕರು ಅಧಿವೇಶನವನ್ನು ಹೆಚ್ಚು ದಿನಗಳ ಕಾಲ ನಡೆಸಬೇಕು. ಚರ್ಚೆಯಲ್ಲಿ ಎಲ್ಲರೂ ಪಾಲ್ಗೊಳ್ಳಲು ಅವಕಾಶವಾಗುತ್ತದೆ. ಮೂರು ದಿನದ ಬದಲಿಗೆ ಏಳು ದಿನ ನಡೆಸಲು ತೀರ್ಮಾನಿಸಲಾಯಿತು.

ಜಂಟಿ ಅಧಿವೇಶನದಲ್ಲಿ ಕೇಂದ್ರ ಸರ್ಕಾರವು ಮನ್ರೇಗಾ ಯೋಜನೆ ಹೆಸರನ್ನು ತಿದ್ದುಪಡಿ ಮಾಡಿ ವಿಕಸಿತ ಭಾರತ- ರೋಜ್ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಖಾತರಿ ಕಾಯ್ದೆ- 2025 ಎಂದು ಮರು ನಾಮಕರಣ ಮಾಡಿರುವ ಬಗ್ಗೆ ಸದನದಲ್ಲಿ ಖಂಡನಾ ನಿರ್ಣಯ ಮಂಡಿಸುವ ಬಗ್ಗೆಯೂ ತೀರ್ಮಾನಿಸಲಾಗಿದೆ. ಸ್ಥಳೀಯ ಆಹಾರ ಉತ್ಪನ್ನಗಳು ಆರೋಗ್ಯ ಜೀವನಶೈಲಿ ಕಾರ್ಯಾಗಾರಗಳು ಕನ್ನಡ ಭಾಷಾ ಕಲಿಕೆ ಕೋರ್ಸ್‌ಗಳು ಕನ್ನಡ ಚಲನಚಿತ್ರ ಟಿಕೆಟ್‌ಗಳು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮೊದಲ ದಿನ ವಿಧಾನ ಮಂಡಲ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ನಂತರ ಮಾರನೇಯ ದಿನ ಮನ್ರೇಗಾ ಕಾಯ್ದೆ ಬದಲಾವಣೆಯ ಬಗ್ಗೆ ವಿಶೇಷ ಚರ್ಚೆ ನಡೆಯಲಿದೆ. ಮನ್ರೇಗಾ ಚರ್ಚೆಗಾಗಿಯೇ ವಿಶೇಷ ಅಧಿವೇಶನ ನಡೆಯಲಿದ್ದು, ನಂತರ ಬಜೆಟ್ ಅಧಿವೇಶನ ಫೆಬ್ರವರಿ ಕೊನೆಯ ವಾರದಲ್ಲಿ ಸಮಾವೇಶಗೊಳ್ಳಲಿದೆ. ನಮ್ಮ ರಾಜ್ಯದ ಜನರ ಹಕ್ಕುಗಳನ್ನ ಕೇಂದ್ರ ಸರ್ಕಾರ ಕಿತ್ತುಕೊಂಡರೆ ಸುಮ್ಮನೆ ಇರಲು ಆಗಲ್ಲ. ಒತ್ತಡ ತಂದು ಮನರೇಗಾ ಯೋಜನೆಯನ್ನ ಪುನಃಸ್ಥಾಪನೆಗೆ ಒತ್ತಡ ಹಾಕಲಾಗುವುದು. ಪಂಜಾಬ್ ಹಾಗೂ ತಮಿಳುನಾಡು ಸಹ ವಿಬಿಜೀ ರಾಮ್ ಜೀ ಕಾಯ್ದೆ ವಿರುದ್ದ ಧ್ವನಿ ಎತ್ತಿವೆ ಎಂದು ಹೇಳಿದರು.

ಮನ್ರೇಗಾ ಸವಾಲು :

ಕೇಂದ್ರ ಸರ್ಕಾರ ಮಹಾತ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಹೆಸರು ಬದಲಾವಣೆ ಮಾಡಿರುವುದರ ವಿರುದ್ಧ ವ್ಯಾಪಕ ಚರ್ಚೆಗಳಾಗುತ್ತಿವೆ. ಕೇಂದ್ರ ಸರ್ಕಾರ ಮಹಾತ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹೆಸರನ್ನು ವಿಕಸಿತ ಭಾರತ ಗ್ರಾಮೀಣ ಉದ್ಯೋಗ ಖಾತ್ರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ ಎಂದು ಬದಲಾವಣೆ ಮಾಡಿದೆ. ಪರಿಷ್ಕೃತ ಯೋಜನೆಯ ಪ್ರಕಾರ ಯೋಜನಾ ವೆಚ್ಚದಲ್ಲಿ ರಾಜ್ಯ ಸರ್ಕಾರಗಳು ಶೇ.40ರಷ್ಟು ವೆಚ್ಚ ಭರಿಸಬೇಕು ಎಂಬ ನಿಯಮ ಇದೆ. ಇದಕ್ಕೆ ರಾಜ್ಯ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿದೆ. ಕಾಮಗಾರಿಗಳ ಆಯ್ಕೆಗೆ ಕೇಂದ್ರ ಸರ್ಕಾರವೇ ಅಧಿಸೂಚಿತ ಪ್ರದೇಶಗಳನ್ನು ಗುರುತಿಸಬೇಕಿದೆ ಹಾಗೂ ಇತರ ವಿಚಾರಗಳ ಬಗ್ಗೆ ಕಾಂಗ್ರೆಸ್ ಪಕ್ಷ ವಿರೋಧ ವ್ಯಕ್ತಪಡಿಸುತ್ತಿದೆ. ರಾಜ್ಯ ಸರ್ಕಾರ ಮಸೂದೆಯಲ್ಲಿನ ನಕಾರಾತಕ ಅಂಶಗಳನ್ನು ಮುಂದಿಟ್ಟುಕೊಂಡು ದೇಶಾದ್ಯಂತ ಪ್ರತಿಭಟನೆ, ಧರಣಿ, ಉಪವಾಸ ಸತ್ಯಾಗ್ರಹ ಹಾಗೂ ಪಾದಯಾತ್ರೆ ಸೇರಿದಂತೆ ಇತರ ಪ್ರಕಾರಗಳಲ್ಲಿ ಹೋರಾಟ ರೂಪಿಸುತ್ತಿದೆ.

ಇದಕ್ಕೆ ಪ್ರತಿಯಾಗಿ ಬಿಜೆಪಿ ಕಾಯ್ದೆಯನ್ನು ಬಲವಾಗಿ ಸಮರ್ಥಿಸಿಕೊಳ್ಳುತ್ತಿದೆ. ಮನ್ರೇಗಾ ಯೋಜನೆಯಲ್ಲಿ ಕೇವಲ ನೂರು ದಿನ ಮಾತ್ರ ಮಾನವ ದಿನಗಳ ಉದ್ಯೋಗಕ್ಕೆ ಅವಕಾಶ ಇತ್ತು. ಪರಿಷ್ಕೃತ ಕಾಯ್ದೆಯಲ್ಲಿ 125 ದಿನಗಳ ಉದ್ಯೋಗಾವಕಾಶ ದೊರೆಯಲಿದೆ ಎಂದು ಪ್ರತಿಪಾದಿಸುತ್ತಿದೆ. ಕೇಂದ್ರ ಸರ್ಕಾರ ರೂಪಿಸಿರುವ ಹೊಸ ಕಾಯ್ದೆ ಜನಪರವಾಗಿದೆ ಎಂದು ಬಿಜೆಪಿ ವಾದಿಸುತ್ತಿದ್ದರೆ, ಕಾಂಗ್ರೆಸ್ ಪಕ್ಷ ಕಾಯ್ದೆಯಿಂದ ಗ್ರಾಮೀಣ ಭಾಗದ ಜನರ ಉದ್ಯೋಗವಕಾಶಗಳು ಕಡಿತಗೊಳ್ಳಲಿವೆ ಎಂದು ಆತಂಕ ವ್ಯಕ್ತಪಡಿಸುತ್ತಿದೆ. ಮಹಾತ ಗಾಂಧೀಜಿ ಅವರ ಹೆಸರು ಬದಲಾವಣೆಯಷ್ಟೇ ಅಲ್ಲ ಕಾಯ್ದೆಯಿಂದ ಗ್ರಾಮೀಣ ಭಾಗದ ಉದ್ಯೋಗಗಳೇ ನಾಶವಾಗುತ್ತವೆ ಎಂದು ಕಾಂಗ್ರೆಸ್ಸಿನ ಆರೋಪ.ಈ ನೆಲೆಯಲ್ಲಿ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್‌ನ ಜೊತೆಗೂ ವಾದ ಪ್ರತಿವಾದಕ್ಕೆ ಅವಕಾಶ ಕಲ್ಪಿಸುವ ಸಲುವಾಗಿ ಸದನದಲ್ಲಿ ಚರ್ಚೆ ನಡೆಯಲಿದೆ.

## ಸಾಹಿತ್ಯ ಸಿಂಚನ

ಅಳೆದು ತೂಗಿ ಇಡಲು ಹೆಜ್ಜೆ
ನಲಿವು ಇತ್ತು ಆಗ
ಮುಳ್ಳು ಮುರಿದು ಅಳುಕಿದಂತೆ
ನೋವೆ ಎಲ್ಲ ಈಗ

ಬಳಸಿ ತೋಳಿನಲ್ಲಿ ಆಗ
ಮಧುರ ಸುಖವತಂದೆ
ತಳ್ಳಿ ದೂರ ನೀನು ಈಗ
ನಿತ್ಯ ಹಿಂಸೆ ನೀಡಿದೆ

ಕೇಳು ನೂರು ಮಾತಿನಿರಿತ
ಬಾಳ್ವೆಗಾಗಿ ಸಹಿಸಿದೆ
ಕಷ್ಟ ನುಂಗಿ ನಡೆದರೂನು
ಬಂಧ ತೊರೆಯ ನಿಂದೆ

ಜೀವ ಹೊತ್ತು ಬಳಲಿದೆನಗೆ
ಕಾಡಿತು ಹಲವು ಪ್ರಶ್ನೆ
ಉತ್ತರವೆ ಎನ್ನ ಸಾವು
ತೊಲಗೀತಾಗ ನೋವು

ಬಡವಿ ಕನಸ ಚಿವುಟಿ ನಿಂತೆ
ನೆರವಿಗಿಲ್ಲ ಯಾರು
ಸಹಿಸಿ ರೋಸಿ ಬಂಡೆ ಆದೆ
ಹೆಣ್ಣಿಗೆಲ್ಲಿ ನೆಲೆಯು

ದೇವರೆಲ್ಲಿ ನಲಿವು ಎಲ್ಲಿ
ತೀರಿತೆನ್ನ ಋಣವು
ಶಿಕ್ಷೆ ಕಾಲ ಕೊಡುವುದೇನೊ
ತಿಳಿಯಬಹುದೆ ಅದನು

ತುಳಸಿದಾಸ ಬಿ ಎಸ್

# ರಹೇಮತ್ ಫೌಂಡೇಶನ್ ಹಟ್ಟಿ ಚಿನ್ನದಗಣಿಯ ಪದಾಧಿಕಾರಿಗಳು ಕಾರುಣ್ಯಾಶ್ರಮಕ್ಕೆ ಭೇಟಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಲಿಂಗಸೂಗೂರು ತಾಲೂಕಿನ ಹಟ್ಟಿ ಚಿನ್ನದ ಗಣಿಯ ರಹೇ ಮತ್ ಫೌಂಡೇಶನ್ ನ ಪದಾಧಿಕಾರಿಗಳು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಭೇಟಿ ನೀಡಿ ಹಾಸಿಗೆ ಹೊದಿಕೆಗಳನ್ನು ವಿತರಿಸಿ ಹಣ್ಣು ಹಂಪಲುಗಳನ್ನು ವಿತರಿಸಿ ಆಶ್ರಯದಾತರುಗಳನ್ನು ಪರಿಚಯಿಸಿಕೊಂಡು ಆತ್ಮಸ್ಥೈರ್ಯ ತುಂಬಿದರು.**

ಈ ಸಮಯದಲ್ಲಿ ರಹೇಮತ್ ಫೌಂಡೇಶನ್ ನ ಸದಸ್ಯರಾದ ರಾಜ್ ಮಹಮ್ಮದ್ ಮಾತನಾಡಿ ನಮ್ಮ ನಾಡಿನ ಕರುಣೆಯ ಕುಟುಂಬವಾಗಿ ಯುವಕರಿಗೆ ಸ್ಫೂರ್ತಿಯಾಗಿ ನಿಸ್ವಾರ್ಥದ ಸೇವೆಯನ್ನು ಅನಾಥರಿಗೆ ಸಮಾಜ–ಕ್ಕೆ ಒದಗಿಸುತ್ತಿರುವ ಈ ಕಾರುಣ್ಯ ಆಶ್ರಮ ಅಲ್ಲಾಹನ ಪ್ರೀತಿಯ ಸ್ವರ್ಗದ ತಾಣವಾಗಿದೆ. ನಾವು ಸುಮಾರು ವರ್ಷಗಳಿಂದ ಕಾರುಣ್ಯ ಆಶ್ರಮದ ಮುಖ್ಯಸ್ಥರಾದ ಚನ್ನಬಸವಯ್ಯ ಸ್ವಾಮಿಯವರ ಸೇವೆಯನ್ನು ಕೇಳಿದ್ದೆವು ಅಷ್ಟೇ



ಆದರೆ ಇಂದಿನ ವಾಸ್ತವ ಸೇವೆಯ ಸ್ಥಿತಿಯನ್ನು ಹರಿದುಕೊಂಡ ನಾವು ನಿರಂತರ ಕಾರುಣ್ಯ ಕುಟುಂಬದ ಸದಸ್ಯರಾಗಿ ಸದಾವಕಾಲವಿರುತ್ತೇವೆ. ಕಾರುಣ್ಯ ಆಶ್ರಮ ಅದೆಷ್ಟೋ ಸಮಾಜ ಸೇವಕರುಗಳಿಗೆ ಸ್ಫೂರ್ತಿಯಾಗಿ ನಮ್ಮ ಕಲ್ಯಾಣ ಕರ್ನಾಟಕದ ಕೀರ್ತಿಯನ್ನು ನಾಡಿಗಲ್ಲದೆ ದೇಶಕ್ಕೆ ತೋರಿಸಿಕೊಟ್ಟಿದೆ.

ಮತ್ತು ಕಾರುಣ್ಯಾಶ್ರಮವು ಜನರಲ್ಲಿ ಹಿರಿಯರಿಗೆ ಗೌರವ ಕೊಡುವುದು ಹಿರಿಯರನ್ನು ಪ್ರೀತಿಸಿ ಪೂಜಿಸಿ ವೃದ್ಧಾಶ್ರಮಕ್ಕೆ ತಳ್ಳದಂತೆ ನೋಡಿಕೊಳ್ಳುತ್ತಿರುವ ಹಲವಾರು ಅಭಿಯಾನಗಳು ಹಟ್ಟಿ ಚಿನ್ನದ ಗಣಿಯ ಪ್ರತಿಯೊಬ್ಬರಿಗೂ ಕೂಡ ತುಂಬಾ ಇಷ್ಟವಾಗಿವೆ. ಇವತ್ತಿನ ಕಾಲದಲ್ಲಿ ಸ್ವಂತ ತಂದೆ ತಾಯಿಯನ್ನು ನೋಡಿಕೊಳ್ಳಲಾರದಂತಹ ಉದಾಹರಣೆಗಳನ್ನು ನಾವು ಕಣ್ಣೆದುರಿಗೆ ಕಾಣುತ್ತಿರುವಂತಹ ಅದೆಷ್ಟೋ ಸನ್ನಿವೇಶಗಳನ್ನು ಕೂಡ ನೋಡುತ್ತಿದ್ದೇವೆ. ಆದರೆ ಸಮಾಜದಿಂದ ತಿರಸ್ಕೃತಗೊಂಡವರನ್ನು ನೆಲೆ ನೆಲೆ ಇಲ್ಲದವರನ್ನು ತಮಗ–ರಿವಿಲ್ಲದೆ ಬದುಕುತ್ತಿರುವ ವಯಸ್ಕರ ಬುದ್ಧಿಮಾಂದ್ಯವನ್ನು ಸ್ವಂತ ಕುಟುಂಬದ ಸದಸ್ಯರಂತೆ ಕಂಡು ಆಶ್ರಮ ಎನ್ನುವ ಪದವನ್ನು ಅಳಿಸಿ ಹಾಕಿ ಕುಟುಂಬವಾಗಿರುವ ಈ ಕಾರುಣ್ಯ ಸಂಸ್ಥೆಯೂ ಪ್ರತಿಯೊಬ್ಬರ ಮನೆ ಮನಸ್ಸಿನಲ್ಲಿರುವುದು ಹೆಮ್ಮೆಯ ವಿಷಯವಾಗಿದೆ.

ಮತ್ತು ವಿಶೇಷವಾಗಿ ನಮ್ಮ ಲಿಂಗಸೂಗೂರಿನ ಪ್ರತಿಯೊಬ್ಬರ ಪ್ರೀತಿಗೆ ಪಾತ್ರವಾಗಿರುವ ಕರಡಕಲ್ ನ ಡಾ. ಮಲ್ಲಿಕಾರ್ಜುನ ಸ್ವಾಮಿಯವರು ಕಾರುಣ್ಯ ಕುಟುಂಬದ ಒಡೆಯರಾಗಿ ಕರುಣೆಯ ಮೂರ್ತಿಗಳಾಗಿ ನಮ್ಮ ಲಿಂಗಸೂಗೂರು ತಾಲೂಕಿಗೆ ಗೌರವ ತಂದು ಕೊಟ್ಟಿರುವುದು ನಮ್ಮೆಲ್ಲರಿಗೆ ಸಂತೋಷವಾಗಿದೆ ಕಾರುಣ್ಯಾಶ್ರಮವು ಕಲ್ಯಾಣ ಕರ್ನಾಟಕದ ಸ್ವರ್ಗದ ತಾಣವಾಗಿದೆ.. ಇನ್ನು ಮುಂದೆ ಯಾವುದೇ ಕಾರುಣ್ಯ ಆಶ್ರಮದ ಸೇವೆಯಲ್ಲಿ ನಮ್ಮ ಫೌಂಡೇಶನ್ ಭಾಗವಹಿಸುತ್ತದೆ ಎಂದು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಅಪ್ಸರ್ ಪಾಷಾ ಅಧ್ಯಕ್ಷರು ರಹಮತ್ ಫೌಂಡೇಶನ್ ಹಟ್ಟಿ ಚಿನ್ನದ ಗಣಿ. ರಸೂಲ್ ಕಾರ್ಯದರ್ಶಿಗಳು.ಶಬ್ಬೀರ್ ಸದಸ್ಯರು. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ.ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮತ್ತು ಹಟ್ಟಿ ಚಿನ್ನದ ಗಣಿಯ ರಹಮತ್ ಫೌಂಡೇಶನ್ ಹಲವಾರು ಪದಾಧಿಕಾರಿಗಳು ಉಪಸ್ಥಿತರಿದ್ದರು

# ರಾಯಚೂರು ಉತ್ಸವದಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿ ಶಾಸಕ ತುರುವಿಹಾಳ ಕರೆ



❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಬುದುವಾರ ಮದ್ಯಾಹ್ನ ಮಸ್ಕಿಯ ತಾಲೂಕಾ ಪಂಚಾಯ್ತಿಯ ಸಭಾಂಗಣದಲ್ಲಿ ಎಡೆದೊರೆ ನಾಡು ರಾಯಚೂರು ಉತ್ಸವ 2026 ರ ಪೂರ್ವಬಾವಿ ಸಭೆಯನ್ನು ನಡೆಸಲಾಯಿತು.**

ಅದರ ಅಧ್ಯಕ್ಷತೆಯನ್ನು ವಹಿಸಿದ್ದ ಮಸ್ಕಿ ಶಾಸಕ ಆರ್,ಬಸನಗೌಡ ತುರುವಿಹಾಳ ಮಾತನಾಡಿ ರಾಯಚೂರು ಉತ್ಸವ ಇದು ನಮ್ಮ ಉತ್ಸವ ಕಾರಣ ಎಲ್ಲರೂ ಉತ್ಸಾಹದಿಂದ ಭಾಗವಹಿಸಿ ಯಶಸ್ವಿಗೊಳಿಸುವ ಜವಬ್ದಾರಿ ನಮ್ಮ ಮೇಲಿದೆ, ಗ್ರಾಮ, ಪಟ್ಟಣ,ಪುರಸಭೆಯ ಪದಾಧಿಕಾರಿ ಸದಸ್ಯರು ಆಯಾ ಊರಿನ ಕಲಾವಿದರಿಗೆ ಸಾರ್ವಜನಿಕ–ರಿಗೆ ಪ್ರಚುರಪಡಿಸಿ ಎಂದು ಹೇಳಿದರು.

ಇದಕ್ಕೂ ಮೊದಲು ಪ್ರಸ್ತಾವಿಕವಾಗಿ ಮಾತನಾಡಿದ ತಹಸಿಲ್ದಾರ್ ಮಂಜುನಾಥ ಬೋಗಾವತಿ ಈ ಉತ್ಸವ ನಮ್ಮೆಲ್ಲರ ಹೆಮ್ಮೆ ಇದರಲ್ಲಿ ಎಲ್ಲ–ರಿಗೂ ಅವಕಾಶವಿದೆ ಇದು 4/1/2026 ರಿಂದ ಆರಂಭವಾಗಿ 31/1/2026 ರತನಕ ನಡೆಯಲಿದೆ ಗ್ರಾಮೀಣಕ್ರೀಡೆಗಳು, ಜಾನಪದ,ಕುಸ್ತಿ, ಮ್ಯಾರಥಾನ್, ಸೈಕ್ಲಿಂಗ್, ಮ್ಯುಜಿಕಲ್ ನೈಟ್, ಉದ್ಯೋಗ ಮೇಳ, ಕವಿಗೋಷ್ಟಿಗಳಂತಹ ಹಲವಾರು ಕಾರ್ಯಕ್ರಮಗಳಿವೆ ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಪುರಸಭೆಯ ಅಧ್ಯಕ್ಷ ಸುರೇಶ ಹರಸೂರು ಇದು ಖುಷಿಯ ವಿಷಯ ಇದರ ಜೊತೆಗೆ ಮುಂದಿನ ವರ್ಷದಿಂದ ಮಸ್ಕಿ ಉತ್ಸವ ಮಾಡಿದರೆ ಇನ್ನೂ ಉತ್ತಮವಾಗುತ್ತದೆ ಎಂದು ಸಲಹೆ ನೀಡಿದರು. ಸರಕಾರಿ ನೌಕರಸಂಘದ ಅಧ್ಯಕ್ಷ ಪಂಪಾಪತಿ ಹೂಗಾರ್ ಮಾತನಾಡಿ ಸ್ಥಳೀಯ ಕಲಾವಿದ–ರಿಗೆ ಹೆಚ್ಚಿನ ಅವಕಾಶಗಳನ್ನು ನೀಡಿ ಅವ–ರಿಗೂ ಪ್ರೋತ್ಸಾಹ ನೀಡಬೇಕು ಜೊತೆಗೆ ಉತ್ತಮ ನೌಕರರನ್ನು ಆಯ್ಕೆಮಾಡಿ ಗೌರವಸನ್ಮಾನ ಮಾಡಿದರೆ ಸೇವೆಮಾಡಲು ಉತ್ಸಾಹ ಬರುತ್ತದೆ ಎಂದರು.

ಈ ಸಭೆಯಲ್ಲಿ ಭಾಗವಹಿಸಿದ್ದ ಕನ್ನಡಪರ,ದಲಿತಪರ,ರೈತಪರ ಸಂಘಟನೆಯ ಮುಖಂಡರು ಸಲಹೆಗಳನ್ನು ನೀಡಿದರು. ವೇದಿಕೆಯ ಮೇಲೆ,ಮಸ್ಕಿ,ಸಿ,ಪಿ,ಐ,ಗ್ಯಾರೆಂಟಿ ಸಮಿತಿಯ ಅಧ್ಯಕ್ಷರು ತಾಲೂಕಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಉಪಸ್ಥಿತರಿದ್ದರು. ಸಭೆಯಲ್ಲಿ ವಿವಿದ ಇಲಾಖೆಗಳ ಅಧಿಕಾರಿಗಳ ,ಗ್ರಾಮ,ಪಟ್ಟಣ,ಪುರಸಭೆಯ,ಸದಸ್ಯರು,ಅಧ್ಯಕ್ಷರು,ಸಂಘಟನೆಗಳ ಪದಾಧಿಕಾರಿಗಳು ಇದ್ದರು. ವರದಿ,,ಹುಚ್ಚೇಶ ನಾಗಲೀಕರ್

# ಮೈಲೇಶ್ವರದಲ್ಲಿ ಬ್ರಿಲಿಯಂಟ್ ಕಲಾ ವೈಭವ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಮೈಲೇಶ್ವರದ ಬ್ರಿಲಿಯಂಟ್ ಕನ್ನಡ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ ಇದರ ಕಲಾ ವೈಭವ ಕಾರ್ಯಕ್ರಮ ಜನವರಿ 16,17ರಂದು ಎರಡು ದಿನಗಳ ಕಾಲ ಶಾಲಾ ಆವರಣದಲ್ಲಿ ನಡೆಯಲಿದೆ. ಜನವರಿ 16 ಶುಕ್ರವಾರ ದಂದು ಬೆಳಿಗ್ಗೆ 9.30 ಘಂಟೆಗೆ ನಡೆಯಲಿರುವ ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯವನ್ನು ಖಾಸ್ಗತೇಶ್ವರ ಮಠದ ಪೂಜ್ಯಶ್ರೀ ಸಿದ್ದಲಿಂಗ ದೇವರು ಹಾಗೂ ಕೋಲಾರದ ಶ್ರೀ ಪಟ್ಟದೇವರು ಹಿರೇಮಠದ ಪೂಜ್ಯ ಪ್ರಭುಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸುವರು.**

ಮುದ್ದೇಬಿಹಾಳ ಕ್ಷೇತ್ರ ಶಿಕ್ಷಣಾಧಿಕಾರಿ ಬಿ ಎಸ್ ಸಾವಳಗಿ ಸಮಾರಂಭವನ್ನು ಉದ್ಘಾಟಿಸುವರು. ಸರ್ವಜ್ಞ ವಿದ್ಯಾಪೀಠ ತಾಳಿಕೋಟಿಯ ಸಿದ್ದನಗೌಡ ಮಂಗಳೂರ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಬಿ. ನಡುವಿನಮನಿ ಅಧ್ಯಕ್ಷತೆ ವಹಿಸುವರು. ಕ್ಷೇತ್ರ ಸಮನ್ವಯಾಧಿಕಾರಿ ಆರ್ ಬಿ ದಮ್ಮೂರಮಠ, ಶಿಕ್ಷಣ ಸಂಯೋಜ–ಕ ಎಸ್ ಎಸ್ ಹಿರೇಮಠ, ಸಿ ಆರ್ ಸಿ ಕೆ.ಎಸ್.ಸಜ್ಜನ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿ ರಾಜು ಮೂರುಮಾನ ಅವರ ಗೌರವ ಉಪಸ್ಥಿತಿ ಇರುವುದು. ನಂತರ ಶಾಲಾ ಮಕ್ಕಳಿಂದ ಸಾಂಸ್ಕೃತಿ–ಕ ಕಾರ್ಯಕ್ರಮಗಳು ಜರುಗುವವು. ದಿನಾಂಕ: 17–01–2026 ಶನಿವಾರ ಬೆಳಿಗ್ಗೆ 9.30 ಗಂಟೆಗೆ ಆರಂಭವಾಗಲಿರುವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಜಾಲಹಳ್ಳಿ ಸಂಸ್ಥಾನ ಬ್ರಹನ್ಮಠದ ಪೂಜ್ಯ ಶ್ರೀ ಷ.ಬ್ರ. ಜಯಶಾಂತಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ತಾಳಿಕೋಟಿಯ ಪೂಜ್ಯ ಶ್ರೀ ಸಿದ್ದಲಿಂಗ ದೇವರು ವಹಿಸುವರು. ತೆಲಸಂಗದ ಜ್ಞಾನಭಾರತಿ ವಿದ್ಯಾ ಸಂಸ್ಥೆ ಅಧ್ಯಕ್ಷ ಡಾ.ಭರಮಣ್ಣ ಕಾಮನ್ ಸಮಾರಂಭ ಉದ್ಘಾಟಿಸುವರು. ಕಾರ್ಕಳ ಅಂಕಣ–ಕಾರರು, ಉಪನ್ಯಾಸಕಿ ಅಕ್ಷಯಾ ಗೋಖಲೆ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಶ್ರೀ ಮಾರುತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್‌ಬಿ ನಡುವಿನಮನಿ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಉಪಾಧ್ಯಕ್ಷ ಆರ್. ಬಿ.ನಡುವಿನಮನಿ, ಕಾರ್ಯದರ್ಶಿ ಎಮ್.ಬಿ.ಮಡಿವಾಳರ, ನಿರ್ದೇಶಕ ಎಸ್.ಹೆಚ್.ಪಾಟೀಲ, ನಿರ್ದೇಶಕಿ ಎಲ್.ಎಂ.ಬಿರಾದಾರ,–ಎನ್.ಎಸ್.ಗಡಗಿ, ನಿರ್ದೇಶಕ ಶಶಿಧರ ಎಮ್.ಬಿರಾದಾರ ಉಪಸ್ಥಿತರಿರುವರು. ವೇದಿಕೆ ಕಾರ್ಯಕ್ರಮದ ನಂತರ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

# ಸ್ಕ್ಕಾಡಾ ಗೇಟ್ ಅಳವಡಿಕೆ ಅವೈಜ್ಞಾನಿಕ ತಡೆಗೆ ರೈತಸಂಘ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರ: ತಾಲೂಕಿನ ನಾರಾಯಣಪುರ ಬಲದಂಡೆ ವಿತರಣಾ ಕಾಲುವೆ ಹಾಗೂ ಉಪ ಕಾಲುವೆಗಳ ಕಾಮಗಾರಿ ಸಂಪೂರ್ಣಗೊಳಿಸದೇ ಆತುರದಲ್ಲಿ ಅವೈಜ್ಞಾನಿಕವಾಗಿ ಸ್ಕಾಡಾ ಗೇಟ್ ಅಳವಡಿಸಲು ಮುಂದಾಗಿರುವ ಅಧಿಕಾರಿಗಳು ಅದನ್ನು ತಕ್ಷಣ ಕೈಬಿಟ್ಟು ಗುಣಮಟ್ಟದ ಕಾಮಗಾರಿ ಮಾಡಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲ್ಲೂಕ ಅಧ್ಯಕ್ಷ ದುರ್ಗಾ ಪ್ರಸಾದ್ ರೆಡ್ಡಿ ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದರು.**

ನಿಯಮದ ಪ್ರಕಾರ ವಿತರಣಾ



ಕಾಲುವೆ ಹಾಗೂ ಉಪ ಕಾಲುವೆಗಳ ನವೀಕರಣ ಕಾಮಗಾರಿ ಪೂರ್ಣಗೊಳಿಸದ ಮೇಲೆ ಸ್ಕಾಡಾ ಗೇಟ್ ಅಳವಡಿಸಬೇಕು. ಆದ–ರೆ, ಅಧಿಕಾರಿಗಳು ನಿಯಮಗಳನ್ನು ಗಾಳಿಗೆ ತೂರಿ ಗುತ್ತಿಗೆದಾರರ ಜೊತೆ ಶಾಮೀಲಾಗಿ ಸರ್ಕಾರದ ಹಣ ಲೂಟಿ ಮಾಡುವ ಹುನ್ನಾರ ನಡೆಸಿದ್ದಾರೆ. ಅವೈಜ್ಞಾನಿಕ ಕಾಮಗಾ–ರಿಯಿಂದಾಗಿ ರೈತರು ಸಂಕಷ್ಟಕ್ಕೆ ಒಳಗಾಗುತ್ತಾರೆ ಎಂದು ಆರೋಪಿಸಿದರು. ಕೂಡಲೇ ಸ್ಕಾಡಾ ಗೇಟ್ ಅಳವಡಿಕೆಯ ಕಾಮಗಾರಿಯನ್ನು ನಿಲ್ಲಿಸಿ.


ಮೊದಲು ಉಪ ಕಾಲುವೆ ಹಾಗೂ ವಿತರಣೆ ಕಾಲುವೆಗಳ ನವೀಕರಣ ಕಾಮಗಾರಿ ಪೂರ್ಣಗೊಳಿಸಿದ ನಂತರ ಸ್ಕಾಡಾ ಗೇಟ್ ಅಳವಡಿಸಬೇಕು, ನಮ್ಮ ಮನವಿಗೆ ಸಂದಿಸದಿದ್ದರೆ ತಮ್ಮ ಕಾರ್ಯಾಲಯದ ಮುಂದೆ ಧರಣಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿರುವರು. ಈ ಸಂದರ್ಭದಲ್ಲಿ ಸದಾನಂದ, ಬಸವರಾಜ, ಮಹಮ್ಮದ್ ಖಜಾ, ನಾಗಪ್ಪ ಪುಣೆದ್, ಲಾಲ್ ಸಾಬ್, ಹನುಮಂತ ಹೊಳೆಪ್ಪ, ರಾಮಣ್ಣ ಆರಿಕೇರಾ, ಅಮರೇಶ ಭೂಪೂರ, ಹುಲಗಪ್ಪ, ರಂಗಪ್ಪ, ತಿಮ್ಮಣ್ಣ ನಾಯಕ ಸೇರಿದಂತೆ ಇತರರು ಇದ್ದರು.

# ಸಂಕಲ್ಪ ವಿಕಲಚೇತನರ ಒಕ್ಕೂಟ ರಾಯಚೂರು ವತಿಯಿಂದ ಮನವಿ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಬೆಂಗಳೂರಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ರವ–ರಿಗೆ ವಿಕಲಚೇತನರ ವಿವಿಧ ನ್ಯಾಯಸಮ್ಮತ ಬೇಡಿಕೆಗಳ ಕುರಿತು ಮನವಿ ಪತ್ರ ಸಲ್ಲಿಸಲಾಗಿದೆ.**

ಸಂಕಲ್ಪ ವಿಕಲಚೇತನರ ಒಕ್ಕೂಟ, ರಾಯಚೂರು ವತಿಯಿಂದ ವಿಕಲಚೇತನರ ಮಾಸಿಕ ಪಿಂಚಣಿ, ಉಚಿತ ಬಸ್ ಪಾಸ್, ವಿಕಲಚೇತನರಿಗಾಗಿ ಮೀಸಲಾದ 5% ಅನುದಾನದ ಸಮರ್ಪಕ ಬಳಕೆ, ಹಾಗೂ ವಿಶೇಷವಾಗಿ ಗ್ರಾಮ



ಸಂಕಲ್ಪ ವಿಕಲಚೇತನರ ಒಕ್ಕೂಟ ರಾಯಚೂರು
ಶಿವಕುಮಾರ್ ಚಲ್ಲಲ್ ಜಿಲ್ಲಾಧ್ಯಕ್ಷರು
#4-1-90/2 ಕೊನಾಪೂರ ಪೇಟೆ, ಮಾನ್ವಿ ಜಿಲ್ಲೆ ರಾಯಚೂರು. 584123.
ದೇಸಾಯಿ ದೊತರಬಂಡಿ ಗೌರವಾಧ್ಯಕ್ಷರು
9740145425

File No: SVOK-RC/2026/01
ದಿನಾಂಕ: 12-01-2026

ಗೆ,
ಮಾನ್ಯ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್
ಮಾನ್ಯ ಸಚಿವರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಬೆಂಗಳೂರು.

ವಿಷಯ: ವಿಕಲಚೇತನರ ವಿವಿಧ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸುವ ಕುರಿತು ಮನವಿ.

ಮಾನ್ಯರೇ,

ನಾನು ಶಿವಕುಮಾರ್ ಚಲ್ಲಲ್ ಜಿಲ್ಲಾಧ್ಯಕ್ಷ ಸಂಕಲ್ಪ ವಿಕಲಚೇತನರ ಸಂಘ ರಾಯಚೂರು ಕರ್ನಾಟಕ ರಾಜ್ಯದ ವಿಕಲಚೇತನರ ಪರವಾಗಿ, ವಿಕಲಚೇತನರ ಹಕ್ಕು, ಗೌರವ ಮತ್ತು ಸಬಲೀಕರಣಕ್ಕಾಗಿ ಈ ಮೂಲಕ ಕೆಳಕಂಡ ಪ್ರಮುಖ ಬೇಡಿಕೆಗಳನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇವೆ.

ರಾಜ್ಯದಲ್ಲಿ ವಿಕಲಚೇತನರ ಕಲ್ಯಾಣಕ್ಕಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸಿರುವುದು ಸ್ವಾಗತಾರ್ಹವಾದರೂ, ಪ್ರಸ್ತುತ ವಿಕಲಚೇತನರು ಎದುರಿಸುತ್ತಿರುವ ಕೆಲವು ಗಂಭೀರ ಸಮಸ್ಯೆಗಳು ಇನ್ನೂ ಪರಿಹಾರ ಕಂಡಿಲ್ಲ. ಈ ಹಿನ್ನೆಲೆಯಲ್ಲಿ ಕೆಳಕಂಡ ಮನವಿಗಳನ್ನು ಪರಿಗಣಿಸಿ ಕ್ರಮ ಕೈಗೊಳ್ಳಬೇಕಾಗಿ ಕೋರಿಕೊಳ್ಳುತ್ತೇವೆ.

ವಿಕಲಚೇತನರಿಗೆ ಒಂದೇ ರೀತಿಯ ಮಾಸಿಕ ಪಿಂಚಣಿಯನ್ನು ಕನಿಷ್ಠ ₹3,000ಕ್ಕೆ ಹೆಚ್ಚಿಸಿ ನೀಡುವ ವ್ಯವಸ್ಥೆ ಜಾರಿಗೊಳಿಸಬೇಕು.

ರಾಜ್ಯದ ಗ್ರಾಮ ಪಂಚಾಯಿತಿ, ಪಟ್ಟಣ, ನಗರ ಹಾಗೂ ತಾಲೂಕು ಮಟ್ಟಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳನ್ನು ಅಧಿಕೃತವಾಗಿ ಖಾಯಂಗೊಳಿಸಿ ಶಾಶ್ವತಗೊಳಿಸಿ, ಕನಿಷ್ಠ ವೇತನ ಕಾಯ್ದೆಗೆ ಅನುಗುಣವಾಗಿ ಸಮರ್ಪಕ ವೇತನ ನಿಗದಿಪಡಿಸಬೇಕು.

ಪುನರ್ವಸತಿ ಕಾರ್ಯಕರ್ತರು ಸಮರ್ಪಕವಾಗಿ ಸೇವೆ ಸಲ್ಲಿಸಲು ಪ್ರತ್ಯೇಕ ಕಚೇರಿ ಕೊಠಡಿ, ವಿಕಲಚೇತನ ಸ್ನೇಹಿ ಸೌಲಭ್ಯಗಳು (ರ್ಯಾಂಪ್, ಶೌಚಾಲಯ, ಪ್ರವೇಶ ವ್ಯವಸ್ಥೆ) ಹಾಗೂ ಅಗತ್ಯ ಪಿಠೋಪಕರಣಗಳು (ಗಣಕಯಂತ್ರ, ಪ್ರಿಂಟರ್, ಲೇಖನ ಸಾಮಗ್ರಿಗಳು) ಒದಗಿಸಬೇಕು.

UDID ಕಾರ್ಡ್ ಹಾಗೂ ವಿಕಲಚೇತನ ಪ್ರಮಾಣಪತ್ರಗಳ ವಿತರಣೆಯಲ್ಲಿ ಆಗುತ್ತಿರುವ ವಿಳಂಬವನ್ನು ನಿವಾರಿಸಿ, ತಾಲ್ಲೂಕು ಮಟ್ಟದಲ್ಲೇ ಒಂದೇ ದಿನದಲ್ಲಿ ದಾಖಲೆ ಪರಿಶೀಲನೆ ಹಾಗೂ ವಿತರಣೆ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು.

ವಿಕಲಚೇತನರಿಗೆ ನೀಡಲಾಗುತ್ತಿರುವ ಬಸ್ ಪಾಸ್‌ಗೆ ವರ್ಷಕ್ಕೆ ₹660 ಶುಲ್ಕ ಹಾಗೂ 100 ಕಿಲೋಮೀಟರ್ ಪ್ರಯಾಣ ಮಿತಿ ಇರುವುದರಿಂದ, ಉದ್ಯೋಗ, ಚಿಕಿತ್ಸೆ, ಶಿಕ್ಷಣ ಹಾಗೂ ಸರ್ಕಾರಿ ಕಚೇರಿ ಕಾರ್ಯಗಳಿಗೆ ತೀವ್ರ ತೊಂದರೆಯಾಗುತ್ತಿದೆ. ಆದ್ದರಿಂದ ಎಲ್ಲಾ ವಿಕಲಚೇತನರಿಗೆ ರಾಜ್ಯಮಟ್ಟದ ಉಚಿತ ಬಸ್ ಪಾಸ್ ಸೌಲಭ್ಯ ಕಲ್ಪಿಸಿ, ಶುಲ್ಕ ಹಾಗೂ ದೂರ ಮಿತಿಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕೆಂದು ಮನವಿ.

ಮಾನ್ಯರೇ, ಮೇಲ್ಕಂಡ ಎಲ್ಲಾ ಬೇಡಿಕೆಗಳು ವಿಕಲಚೇತನರ ಬದುಕಿಗೆ ನೇರವಾಗಿ ಸಂಬಂಧಿಸಿದ ಅತ್ಯಂತ ಅಗತ್ಯ ಹಾಗೂ ನ್ಯಾಯಸಮ್ಮತ ಬೇಡಿಕೆಗಳಾಗಿವೆ. ಆದ್ದರಿಂದ ಈ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ, ವಿಕಲಚೇತನರ ಹಿತದೃಷ್ಟಿಯಿಂದ ಶೀಘ್ರ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇವೆ.

ಧನ್ಯವಾದಗಳೊಂದಿಗೆ,
13/01/2026
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರ ಆಪ್ತ ಶಾಖೆ, ವಿಧಾನಸೌಧ ಬೆಂಗಳೂರು.
ಶಿವಕುಮಾರ್ ಚಲ್ಲಲ್ ಜಿಲ್ಲಾಧ್ಯಕ್ಷರು

ಪಂಚಾಯಿತಿ, ಪಟ್ಟಣ, ನಗರ ಮತ್ತು ತಾಲೂಕು ಮಟ್ಟಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳನ್ನು ಶಾಶ್ವತಗೊಳಿಸುವುದು ಅಥವಾ ಕನಿಷ್ಠ ವೇತನ ನಿಗದಿಪಡಿಸುವುದು, ಪ್ರತ್ಯೇಕ ಕಚೇರಿ ಕೊಠಡಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಮನವಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ವಿಕಲಚೇತನರ ಹಾಗೂ ಪುನರ್ವಸತಿ ಕಾರ್ಯಕರ್ತರ ಸಮಸ್ಯೆಗಳ ಶಾಶ್ವತ ಪರಿಹಾರಕ್ಕಾಗಿ ಈ ಮನವಿ ಸಲ್ಲಿಸಲಾಗಿದ್ದು, ಮುಂದಿನ ದಿನಗಳಲ್ಲೂ ವಿಕಲಚೇತನರ ಹಕ್ಕು ಮತ್ತು ಸಬಲೀಕರಣಕ್ಕಾಗಿ ಸಂಘಟನೆಯ ಹೋರಾಟ ನಿರಂತರವಾಗಿ ಮುಂದುವರಿಯಲಿದೆ ಎಂದು ಸಂಕಲ್ಪ ವಿಕಲಚೇತನರ ಒಕ್ಕೂಟ ತಿಳಿಸಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಈಡಿಗರ ಬೇಡಿಕೆಗಳನ್ನು ರಾಜ್ಯ ಸರಕಾರ ನಿರ್ಲಕ್ಷ್ಯ ಮಾಡಿದರೆ ಉಗ್ರ ಹೋರಾಟ :ಪ್ರಣಾವಾನಂದ ಸ್ವಾಮೀಜಿ

❑ ನೈಜ್ಯ ದೆಸೆ ನ್ಯೂಸ್

**ಅರಕೇರಾ: ರಾಜ್ಯ ಸರ್ಕಾರ ಈಡಿಗ ಸಮಾಜದ ವಿವಿಧ ಬೇಡಿಕೆಗಳನ್ನು ಈಡೇರಿಸಲು ನಿರ್ಲಕ್ಷ್ಯ ಮಾಡಿದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಪ್ರಣಾವನಂದ ಸ್ವಾಮೀಜಿ ಅವರು ಹೇಳಿದರು. ಅವರು ಅರಕೇರಾ ಪಟ್ಟಣದ ಮಹರ್ಷಿ ವಾಲ್ಮೀಕಿ ಸಮುದಾಯ ಭವನದಲ್ಲಿ ಆರ್ಯ ಈಡಿಗ ಸಮಾಜ ಹಮ್ಮಿಕೊಂಡಿದ್ದ ಜಾಗೃತಿ ಸಭೆಯಲ್ಲಿ ಮಾತನಾಡಿ, ಈಗಾಗಲೇ ರಾಜ್ಯ ಸರಕಾರಕ್ಕೆ ಸಮಾಜದ 18 ಬೇಡಿಕೆಗಳನ್ನು ಈಡೇರಿಸುವಂತೆ ಚಿತ್ತಾಪುರ ದಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.**

ರಾಜ್ಯ ಸರಕಾರ ಬೇಡಿಕೆಗಳನ್ನು ಈಡೇರಿಸುವರೆಗೂ ಪಾದಯಾತ್ರೆ ಮುಂದುವ–ರಿಯುತ್ತದೆ ಎಂದು ಹೇಳಿದರು. ಈ ಸಭೆಯಲ್ಲಿ ಬಿಜೆಪಿ ಮುಖಂಡರಾದ ಅನಂತರಾಜ್ ನಾಯಕ ಮಾತನಾಡಿ, ಈಡಿಗ



ಸಮಾಜದ ಬೇಡಿಕೆಗಳು ನ್ಯಾಯಯುತವಾಗಿದ್ದು ಸರಕಾರ ಕೂಡಲೇ ಸ್ಪಂದನೆ ಮಾಡಬೇಕು. ಸಣ್ಣ ಸಮುದಾಯಗಳು ಹೋರಾಟದ ಮೂಲಕ ತಮ್ಮ ಹಕ್ಕುಗಳು ಪಡೆಯಲು ಸಾಧ್ಯ ಎಂದು ಹೇಳಿದರು. ಆರ್.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕರು ಹಾಗೂ ಕಾಂಗ್ರೆಸ್ ಮುಖಂಡ ಶ್ರೀ ರಾಜಶೇಖರ ನಾಯಕ ಮಾತನಾಡಿ, ಪೂಜ್ಯರು ಸಮಾಜದ ಬೇಡಿಕೆಗಳನ್ನು ಈಡೇರಿಸುವಂತೆ ಮಾಡುತ್ತಿರುವ ಪಾದಯಾತ್ರೆಯು ಯಶಸ್ವಿಯಾಗಲಿ, ನಮ್ಮ ಸರಕಾರ ನಿಮ್ಮ ಬೇಡಿಕೆಗಳಿಗೆ ಸ್ಪಂದಿಸುತ್ತದೆ. ಈಡಿಗ ಸಮಾಜವು ಎಲ್ಲ ಸಮುದಾಯಗಳೊಂದಿಗೆ ಒಳ್ಳೆಯ ಬಾಂಧವ್ಯ ಹೊಂದಿದ್ದು. ನಿಮ್ಮ ಹೋರಾಟಕ್ಕೆ ನಮ್ಮ ಬೆಂಬಲವಿದೆ ಎಂದು ಹೇಳಿದರು. ಶಾಸಕಿ ಕರೆಮ್ಮ ಜಿ.ನಾಯಕ ಅವರ ಪುತ್ರಿ ಕುಮಾರಿ ಗೌರಿ ಸಹ ಪಾದಯಾತ್ರೆಯಲ್ಲಿ ಭಾಗವಹಿಸಿ ನಿಮ್ಮ ಸಮುದಾಯದ ಜೊತೆ ನಾವು ಇದ್ದೇವೆ ಸರಕಾರ ನಿಮ್ಮ ಬೇಡಿಕೆಗಳಿಗೆ ಕೂಡಲೇ ಸ್ಪಂದನೆ ಮಾಡಬೇಕು ಎಂದು ಪಾದಯಾತ್ರೆ ಉದ್ದಕ್ಕೂ ಹೆಜ್ಜೆ ಹಾಕಿದರು. ಬಸವರಾಜ ಪೂಜಾರಿ ಮಾತನಾಡಿ ನಿಮ್ಮ ಸಮಾಜದ ಬೇಡಿಕೆಗಳಿಗೆ ನಮ್ಮ ಬೆಂಬಲ ಸಹ ಇರುತ್ತದೆ ಎಂದು ಹೇಳಿದರು. ನಾರಾಯಣಗುರು ಪ್ರತಿಮೆ ಹೊತ್ತ ಸಾರೋಟದೊಂದಿಗೆ ಪ್ರಣವಾನಂದ ಸ್ವಾಮೀಜಿ ಹಾಗೂ ಈಡಿಗ ಸಮಾಜದ ಬಂಧುಗಳೊಂದಿಗೆ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಪಕ್ಷದ ಮುಖಂಡರು ಪಾದಯಾತ್ರೆಉದ್ದಕ್ಕೂಹೆಜ್ಜೆಹಾಕಿಬೆಂಬಲನೀಡಿದರು.

ಈ ಸಂದರ್ಭದಲ್ಲಿ ಈಡಿಗ ಸಮಾಜದ ಪೂಜ್ಯರಾದ ಮುನೇಶಪ್ಪ ತಾತಾ ನಾಗೋಲಿ, ರವಿ ಚನ್ನಬಸವ ತಾತಾ ನಾಗೋಲಿ, ಬಿಜೆಪಿ ಹಿರಿಯ ಮುಖಂಡ ಕೆ.ಅನಂತರಾಜ್ ನಾಯಕ, ಆರ.ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಕಾಂಗ್ರೆಸ್ ಮುಖಂಡ ಎ.ರಾಜಶೇಖರ ನಾಯಕ, ಶಾಸಕರ ಸುಪುತ್ರಿ ಗೌರಿ ಜಿ. ನಾಯಕ, ಕಾಂಗ್ರೆಸ್ ಮುಖಂಡ ಬಸವರಾಜ ಪೂಜಾರಿ, ವೆಂಕಟೇಶ ನಾಯಕ ದೊರೆ, ಸಚಿನ್ ನಾಯಕ್ ಪೋಲೀಸ್ ಪಾಟೀಲ್, ಜಿಲ್ಲಾಧ್ಯಕ್ಷ ನರಸಣ್ಣಗೌಡ ರಾಯಚೂರು, ರಾಚಣ್ಣ ಅಬಕಾರಿ ಗಣೇಕಲ್, ಶಾಂತಪ್ಪ ಸಾಹುಕಾರ, ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಶರಣಗೌಡ ಸುಂಕೇಶ್ವರಹಾಳ, ರಂಗನಾಥ ಅಬಕಾರಿ, ಮಹಾತೇಶ ಪೂಜಾರಿ, ನಾಗಾರಜ ಕರ್ನಾಳ, ಡಾ.ಬಸನಗೌಡ ನಾಡಗೌಡ, ವಿರುಪಣ್ಣ ದೊರೆ ಶಿಕ್ಷಕರು, ಜಿ.ಹನುಂತ್ರಾಯ ಕೊತ್ತದೊಡ್ಡಿ, ಅಶೋಕ ಜಾಗಭಾವಿ, ರಾಮನಗೌಡ ಸಿರಿವಾರ, ರಾಮನಂದ ಪಾಟೀಲ್, ಗದೆಪ್ಪ ಗುತ್ತೇದಾರ, ಮಹಾದೇವಪ್ಪ ನಾಗೋಲಿ, ಅಮರೇಶ ಇಟಗಿ, ಹನುಮಯ್ಯ ಕೊತ್ತದೊಡ್ಡಿ, ನಾಗರಾಜ ಜಾಡಲದಿನ್ನಿ, ಬಸವರಾಜ ಜಾಗಟಗಲ್, ಹುಸೇನಯ್ಯ ಜುಟ್ಟಮರಡಿ, ರಾಮು ಗುತ್ತೇದಾರ, ನರಸಪ್ಪ ಗುತ್ತೇದಾರ, ನಾಗೇಂದ್ರ ಗುತ್ತೇದಾರ, ರೆಡ್ಡಪ್ಪ ಗುತ್ತೇದಾರ, ವೆಂಕಟೇಶ ನಾಗೋಲಿ, ಚನ್ನಬಸವ ನಾಗೋಲಿ, ರಂಗಪ್ಪ ಭೂಮನಗುಂಡ ಸೇರಿದಂತೆ ವಿವಿಧ ಗ್ರಾಮಗಳ ಸಮಾಜದ ಮುಖಂಡರು ಹಾಗೂ ಈಡಿಗ ಸಮಾಜದ ಭಾಂಧವರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

IRCTC ನೇಮಕಾತಿ 2026 1 ಗ್ರೂಪ್ ಜನರಲ್ ಮ್ಯಾನೇಜರ್ ಹುದ್ದೆಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ IRCTC ನೇಮಕಾತಿ 2026: 1 ಗ್ರೂಪ್ ಜನರಲ್ ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತೀಯ ರೈಲ್ವೆ ಅಡುಗೆ ಮತ್ತು ಪ್ರವಾಸೋದ್ಯಮ ನಿಗಮವು ಜನವರಿ 2026 ರ IRCTC ಅಧಿಕೃತ ಅಧಿಸೂಚನೆಯ ಮೂಲಕ ಗ್ರೂಪ್ ಜನರಲ್ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕೋಲ್ಕತ್ತಾ-ಪಶ್ಚಿಮ ಬಂಗಾಳ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 28-ಜನವರಿ-2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 30-12-2025 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28-ಜನವರಿ-2026 ಅಧಿಕೃತ ವೆಬ್‌ಸೈಟ್: irctc.com

# ಅರಕೇರಾ: ಸಿದ್ಧರಾಮೇಶ್ವರರ ತತ್ವ ಆದರ್ಶಗಳು ಅಳವಡಿಕೊಳ್ಳಿ: ರಾಜಶೇಖರನಾಯಕ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ಬೋವಿ ಜನಾಂಗದವರು ಆರ್ಥೀಕ ಶೈಕ್ಷಣ ಕವಾಗಿ ಸಾಮಾಜಿಕವಾಗಿ ಹಿಂದುಳಿದಿದೆ. ಎಲ್ಲಾರು ನಿಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿಸಿ ಉತ್ತಮ ಶಿಕ್ಷಣ ಕೊಡಿಸಿ ಶೈಕ್ಷಣ ಕವಾಗಿ ಮುಂದೆ ಬಂದು ಸರಕಾರದ ಸೌಲಭ್ಯಗಳನ್ನು ಪಡೆಯಬೇಕು ಹಾಗೂ ನಿಮ್ಮ ಸಮಾಜದಲ್ಲಿನ ಕಟ್ಟ ಕಡೆ ಇರುವ ವ್ಯಕ್ತಿಗೂ ಕೂಡಾ ಸೌಲಭ್ಯಗಳನ್ನು ಸಿಗುವಂತಾಗಬೇಕೆಂದು ರಾಜಶೇಖರನಾಯಕ ಮಾಜಿ ಅಧ್ಯಕ್ಷರು ಹಾಲಿ ನಿರ್ದೇಶಕರು ಹೇಳಿದರು.**

ಅವರು ಅರಕೇರಾ ಪಟ್ಟಣದಲ್ಲಿನ ಬೋವಿ (ವಡ್ಡರ) ಸಮಾಜ ಅರಕೇರಾ ತಾಲೂಕ ಘಟಕದವತಿಯಿಂದ ಹಮ್ಮಿಕೊಂಡಿದ್ದ ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ಭಾವ ಚಿತ್ರವಿರುವ ನಾಮಫಲಕವನ್ನು ಉದ್ಘಾಟಿಸಿ ಮಾತನಾಡಿದ ಅವರು ನಿಮ್ಮ ಸಮಾಜದ ಧರ್ಮಗುರುಗಳಾದ ಶ್ರೀಸಿದ್ಧರಾಮೇಶ್ವರರ ಚಿತ್ರ ನಾಮಫಲಕವನ್ನು ಇಂದು ನಾಮಕರಣ ಆಗಿರುವದು ಸಂತೋಷದವಿಷಯ. ಶಿವಯೋಗಿ



ಸಿದ್ಧರಾಮೇಶ್ವರರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅನುಸರಿಸಿದಲ್ಲಿ ಆದರ್ಶ ಜೀವನ ನಡೆಸಲು ಸಾಧ್ಯವೆಂದರು. ಆದ-'ರೆ ಅವಸರದಲ್ಲಿ ನಾಮಫಲಕ ಅಳವಡಿಸಿದ್ದಿರಿ. ಇದನ್ನು ಉತ್ತಮವಾದ ಸ್ಥಳದಲ್ಲಿ ನಿರ್ಮಿಸಿ ಮೂರ್ತಿಮಾಡಿದರೆ ಒಳ್ಳೆಯದು ಇದಕ್ಕೆ ನಿಮ್ಮ ಸಮಾಜದ ಜೋತೆಯಲ್ಲಿ ನಾವೆಲ್ಲರೂ ಸಹಕಾರ ನೀಡುವುದಾಗಿ ಭಸರವಸೆ ನೀಡಿದರು. ದೇಶ ಕಟ್ಟುವ ಕಾಯಕದಲ್ಲಿ ತೋಡಗಿಕೊಂಡಿರುವ ಬೋವಿ ಸಮಾಜಕ್ಕೆ ಮಂದಿರ ಕಟ್ಟುವ ಕಾಯಕದಲ್ಲಿಗುರುತಿಸಿಕೊಂಡಿರುವ ಬೋವಿ ಸಮಾಜ ಹೀಗೆ ಸಮುದಾಯದ ಪರ ಅನೇಕ ಸಮಾಜಿಕ ಸೇವೆ ಕಲ್ಲಿನಲ್ಲಿ ಹೂ ಅರಳಿಸುವ ,ಮಣ ?ಣನಲ್ಲಿ ನಾಡನ್ನು ಕಟ್ಟುವ ಶ್ರಮಜೀವಿಗಳು ಬೋವಿ ಸಮಾಜದವರು ಎಂದರೆ ತಪ್ಪಲ್ಲ ಎಂದು ಬಿಜೆಪಿ ಹಿರಿಯ ಮುಖಂಡರಾದ ಕೆ,ಅನಂತರಾಜನಾಯಕ ಅಭಿಪ್ರಾಯಪಟ್ಟರು. ,ಬಸವರಾಜಪೂಜಾರಿ ವೆಂಕಟೇಶನಾಯಕದೊರೆ ಮಾತನಾಡಿದರು. ಶಿವಯೋಗಿ ಸಿದ್ಧರಾಮೇಶ್ವರ ಭಾವಚಿತ್ರಕ್ಕೆ ಮಹೇಶಸ್ವಾಮಿ ಮಠಪತಿಯವರು ಪೂಜೆಸಲ್ಲಿಸಿದರು. ಸಂದರ್ಭದಲ್ಲಿಚನ್ನ ವೀರಯ್ಯಸ್ವಾಮಿಹಿರೇಮಠ,ಬಸವರಾಜ ಪೂಜಾರಿ, ಕೆ, ಭಗವಂತ್ರಾಯನಾಯಕ, ವೆಂಕಟೇಶ ನಾಯಕದೊರೆ, ಚಂದ್ರಶೇಖರ ಶೆಟ್ಟಿ,ಸಚಿನ ನಾಯಕ ಪೋಲಿಸ್ ಪಾಟೀಲ್ ಮಂಜುನಾಥ ಪೂಜಾರಿ,ರಾಮನಗೌಡ 'ಕ್ವಾಟೆದೊರೆ,ರವಿನಾಯಕ,ಬಾಷವೈಲ್ಡಿಂಗ್,ಸಿದ್ದಪ್ಪಪ್ಯಕಾರ. ಹನುಮಂತರಾಯ ನಾಯಕ ಕೊತ್ತದೊಡ್ಡಿ,ಹನುಮಯ್ಯಗಾಲಿ, ಬೂದೆಪ್ಪಪರಸಲ್, ದೇವಪ್ಪ ಸಾತಲ್, ಮಲ್ಲಪ್ಪಕಬ್ಬೇರ, ರಂಗಣ್ಣಗಾಲಿ, ರವಿಕುಮಾರ ಪತ್ತಾರ, ವಿಶ್ವನಾಥಪತ್ತಾರ, ಗ್ರಾಮ ಪಂಚಾಯತ ಸರ್ವಸದಸ್ಯರುಗಳು ಬೋವಿಸಮಾಜದ ಮುಖಂಡರಾದ ಸಂತೋಷಭಾಂಗಿ, ಅಮರೇಶಭಂಗಿ, ಹನುಮಂತ, ವೀರೇಶ ಮ್ಯಾಕಲ್, ನಾಗರಾಜಮ್ಯಾಕಲ್, ಹನಮೇಶದಿನಸವರಿ, ರಮೇಶಭಂಗಿ, ಮುದಕಪ್ಪಕೊಕ್ಕಲ್, ತಿಮ್ಮಣ್ಣಹುಲಿಗುಡ್ಡ, ಬಸವಕಾರಬಾರಿ, ರಮೇಶದಿನಸವರಿ, ಚನ್ನಬಸವ ಭಂಗಿ, ಯಲ್ಲಪ್ಪದಿನಸವಾರಿ, ಸುರೇಶ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## ಶಿವಯೋಗಿ ಸಿದ್ದರಾಮೇಶ್ವರ 853ನೇ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಶಿವಯೋಗಿ ಸಿದ್ದರಾಮೇಶ್ವರ 853ನೇ ಜಯಂತಿಯನ್ನು ತಹಸೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕಾಡಳಿತದಿಂದ ಬುಧವಾರ ಆಚರಿಸಲಾಯಿತು. ತಹಸೀಲ್ದಾರ್ ಮಂಜುನಾಥ ಭೋಗಾವತಿ ಸಿದ್ದರಾಮೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡುವ ಮೂಲಕ ಜಯಂತಿಯನ್ನು ಆಚರಿಸಿದರು.**

ಶಾಸಕರಿಂದ ಮಾಲಾರ್ಪಣೆ: ಶಿವಯೋಗಿ ಸಿದ್ದರಾಮೇಶ್ವರ 854ನೇ ಜಯಂತ್ಯೋತ್ಸವ ಅಂಗವಾಗಿ ಪಟ್ಟಣದ ಸಿದ್ದರಾಮೇಶ್ವರ



ವೃತದ ನಾಮಫಲಕಕ್ಕೆ ಶಾಸಕ ಆರ್.ಬಸನಗೌಡ ತುರ್ವಿಹಾಳ ಮಾಲಾರ್ಪಣೆ ಮಾಡಿ ನಂತರ ಮಾತನಾಡಿದ ಅವರು 12ನೇ ಶತಮಾನದಲ್ಲಿ ಬಸವಾದಿ ಶರಣ-ರೊಂದಿಗೆ ಕೈಜೋಡಿಸಿ ಸಾಮಾಜಿಕ ಸಮಾನತೆ, ಮಾನವೀಯತೆ ಮತ್ತು ಧರ್ಮನಿಷ್ಠ ಜೀವನದ ಸಂದೇಶವನ್ನು ಸಮಾಜಕ್ಕೆ ತಲುಪಿಸಲು ಶ್ರಮಿಸಿದ್ದಾರೆಂದು ಹೇಳಿದರು.

ಈ ಸಂದರ್ಭದಲ್ಲಿ ತಾ.ಪಂ.ಇಓ ಅಮರೇಶ ಯಾದವ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ, ಗ್ರಾಮೀಣ ಘಟಕದ ಅಧ್ಯಕ್ಷ ಹನುಮಂತಪ್ಪ ಮುದ್ದಪೂರ, ಗ್ಯಾರಂಟಿ ಯೋಜನೆ ಅಧ್ಯಕ್ಷ ಮೈಬುಸಾಬ ಮುದ್ದಪೂರ, ದುರುಗಪ್ಪ ಚಿಗರಿ ಸೇ-ರಿದಂತೆ ಭೋವಿ ಸಮಾಜದ ಹಲವಾರು ಮುಖಂಡರು ಉಪಸ್ಥಿತರಿದ್ದರು.

# ಸ್ವಾಮಿ ವಿವೇಕಾನಂದರು ಮಹಾನ್ ಸಂತ: ಪ್ರಾಚಾರ್ಯ ಬಂಟನೂರ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಸ್ವಾಮಿ ವಿವೇಕಾನಂದರು ಮಹಾನ್ ಸಂತ, ದೇಶಪ್ರೇಮಿ, ಯುವಕರ ಕಣ್ಮಣಿ ಸೂರ್ಯನಂತೆ ಬೆಳಗಿ ಭಾರತದಲ್ಲಿ ಮುಸುಕಿದ ಕತ್ತಲೆಯೂ ದೂರ ಸರಸಿದ ಪುಣ್ಯಾತ್ಮ ಎಂದು ಸ್ಥಳೀಯ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಆರ್.ಎಂ.ಬಂಟನೂರ ಹೇಳಿದರು.**


ಸೋಮವಾರ ಎಸ್ ಕೆ ಶಿಕ್ಷಣ ಮಹಾವಿದ್ಯಾಲಯದಲ್ಲಿ "ರಾಷ್ಟ್ರೀಯ ಯುವ ದಿನ " ಸ್ವಾಮಿ ವಿವೇಕಾನಂದರ 163ನೇ ಜಯಂತೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಿಮ್ಮ ನಗರಗಳನ್ನು ಬಲಗೊಳಿಸಿರಿ ನಮಗೆ ಉಕ್ಕಿನ ನರಗಳುಳ್ಳ ಕಬ್ಬಿಣದ ಅಂತಹ ಮನುಷ್ಯರು ಬೇಕಾಗಿದ್ದಾರೆ. ಇಲ್ಲಿಯವರೆಗೆ ದೀನರಾಗಿ ವರ್ತಿಸಿದ್ದೀರಿ ಇನ್ನು ಇದು ಯೋಗ್ಯ ಮನುಷ್ಯನನ್ನು ನಿರ್ಮಿಸಬಲ್ಲ ಮಾನವ ಧರ್ಮ ನಮಗೆ ಬೇಕಾಗಿದೆ ಅದಕ್ಕಾಗಿ ಎದ್ದೇಳಿ ಎಂದು ಸ್ವಾಮಿ ವಿವೇಕಾನಂದರು ಕರೆ ನೀಡಿದ್ದರು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಐಕ್ಯುಎಸಿ ಸಂಯೋಜಕ ಉಮೇಶ ಮಂಗೊಂಡ ಅವರು ಸ್ವಾಮಿ ವಿವೇಕಾನಂದರ ತತ್ವ ಸಿದ್ಧಾಂತಗಳುನ್ನು ಮೈಗೂಡಿಸಿಕೊಂಡು ಬದುಕು ಸಾಗಿಸಬೇಕು, ಧರ್ಮ ದೇಶಭಕ್ತಿಯನ್ನು ಯುವಕರು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು. ಉಪನ್ಯಾಸಕ ಗಂಗನಗೌಡರ ಮಾತನಾಡಿ ಭಾರತವನ್ನು ತಿಳಿದುಕೊಂಡು ಅರ್ಥೈಸಿಕೊಳ್ಳುವ ಮೊದಲು ಸ್ವಾಮಿ ವಿವೇಕಾನಂದರ ಜೀವನ ಅವರ ತತ್ವಗಳನ್ನ ತಿಳಿದು ಓದಿ ಅಥ-'ೈಸಿಕೊಳ್ಳಬೇಕು ಎಂದು ಹೇಳಿದರು. ಉಪನ್ಯಾಸಕ ಮನೋಹರ ಪೋತದಾರ ಅವರು ಸ್ವಾಮಿ ವಿವೇಕಾನಂದರು ಮಹಾನ್ ಮಾನವತಾವಾದಿ ದಾರ್ಶನಿಕ ನವ ಭಾರತದ ನಿರ್ಮಾಪಕ ವೇದಾಂತ ಕೇಸರಿ ವೀರ ಸನ್ಯಾಸಿ ಸನಾತನ ಧರ್ಮ ಪರಿಪಾಲಕ ಯುವಕರ ಕಣ್ಮಣಿ ಯುವಕರಿಗೆ ಸ್ಪೂರ್ತಿದಾಯಕ ರಾಗಿದ್ದರು ಎಂದು ಹೇಳಿದರು. ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಾದ ಕು. ಕು.ಸುಮಂಗಲಾ ಕು. ಲಕ್ಷ್ಮೀ ಬಡಿಗೇರ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರು ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಕು.ಸಾವಿತ್ರಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಕು.ಮದು ನಾಡಗೌಡ ಸ್ವಾಗತಿಸಿ ಪರಿಚಯಿಸಿದರು.ಬಸವರಾಜ ವಂದಿಸಿದರು. ಕುಮಾರಿ ಅನ್ನಪೂರ್ಣೇಶ್ವರಿ ನಿರೂಪಿಸಿದರು.

## ನೂತನ ಆರಕ್ಷಕ ನಿರೀಕ್ಷಕ ಹೊಸಕೇರಪ್ಪ. ಕೆ ಇವರಿಗೆ ಕರುನಾಡ ವಿಜಯ ಸೇನೆ ಅಧ್ಯಕ್ಷರಿಂದ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜ 15 ನೂತನ ಆರಕ್ಷಕ ನಿರೀಕ್ಷಕರಾಗಿ ಲಿಂಗಸಗೂರು ಪಟ್ಟಣಕ್ಕೆ ಬಂದ ಹೊಸಕೇರಪ್ಪ. ಕೆ ಇವರಿಗೆ ಕರುನಾಡ ವಿಜಯ ಸೇನೆ ತಾಲೂಕ ಅಧ್ಯಕ್ಷ ಹನುಮಂತ ಬಡಿಗೇರ್ ಹಾಗೂ ಕರುನಾಡ ವಿಜಯಸೇನೆ ತಾಲೂಕು ಸಮಿತಿ ವತಿಯಿಂದ ಸನ್ಮಾನ ಮಾಡಲಾಯಿತು.**



ಈ ಸಂದರ್ಭದಲ್ಲಿ ತಾಲೂಕು ಉಪಾಧ್ಯಕ್ಷರಾದ ರಂಗಪ್ಪ ಭೋವಿ, ಎಸಿ/ಎಸ್ ಟಿ, ದುರಗಪ್ಪ ಪೂಜಾರಿ, ಪರಶುರಾಮ ಗೋರೆಬಾಳ, ಮೌನೇಶ ಅಡವಿಬಾವಿ, ಚಂದ್ರಶೇಖರ್ಜಾಪೂರ,ಬಸವರಾಜ ರತ್ತಾಳ, ತಾಲೂಕು ಮಹಿಳಾ ಘಟಕ ಉಪಾಧ್ಯಕ್ಷರು ಶ್ರೀಮತಿ ಗದ್ದೆಮ್ಮ, ರೇಷ್ಮಾ ಚಿತಾಪೂರ, ಹಾಗೂ ಸಂಘಟನೆಯ ಪದಾಧಿಕಾರಿಗಳು ಸೇರಿದಂತೆ ಇದ್ದರು.

# ಬ್ಲಾಕ್ ಕಾಂಗ್ರೆಸ್ ನಿಂದ ಜ.19ಕ್ಕೆ ಗ್ರಾ.ಪಂ.ಮಟ್ಟದಲ್ಲಿ ಮನರೇಗಾ ಬಚಾವ್ ಆಂದೋಲನ ಉದ್ಘಾಟನೆ.

ನೈಜ್ಯ ದೆಸೆ ನ್ಯೂಸ್

**ಕೆಪಿಸಿಸಿ ಪಕ್ಷದ ಅಧ್ಯಕ್ಷರ ಆದೇಶದ ಮೇರೆಗೆ ಜ.19 ರಂದು ರಾಗಲಪರ್ವಿ, ರಾಮತ್ನಾಳ, ಹೆಡಗಿನಾಳ, ಗ್ರಾಮಗಳಲ್ಲಿ ಮೊದಲ ದಿನ ಉದ್ಘಾಟಿಸಲಾಗುತ್ತಿದೆ. ನಂತರ ಉಪವಾಸ ಸತ್ಯಾಗ್ರಹ 5 ಕಿ.ಮೀ.ದಿಂದ 10 ಕಿ.ಮೀ.ವರೆಗೂ ಪಾದಯಾತ್ರೆ ಕುರಿತಾಗಿ ಮಾಹಿತಿ ನೀಡಲಾಗುತ್ತದೆ ಎಂದು ಬ್ಲಾಕ್ ಕಾಂಗ್ರೆಸ್ ಗ್ರಾಮೀಣ ಅಧ್ಯಕ್ಷ ಲಿಂಗಪ್ಪ ಧಡೇಸೂಗೂರು ತಿಳಿಸಿದರು.**

ನಗರದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮನರೇಗಾ ಯೋಜನೆ ಬಡವರ, ಶ್ರಮಿಕರ, ಕೂಲಿಗಳ ದುಡಿಯುವ ಕೈಗಳನ್ನು



ಕಟ್ಟಿಹಾಕುವ ಕೆಲಸ ಕೇಂದ್ರ ಸರ್ಕಾರ ಮಾಡುತ್ತಿದೆ. ನರೇಗಾ ಯೋಜನೆಯಲ್ಲಿನ ನಿಯಮಗಳನ್ನು ಬದಾಲಾಯಿಸಿದ್ದನ್ನು ವಿರೋಧಿಸಿ ಜ.19 ರಿಂದ ತಾಲೂಕಿನ ಪ್ರತಿಯೊಂದು ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಭೆಗಳನ್ನು ನಡೆಸಲಾಗುತ್ತಿದೆ ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಹಾಲಿ ಶಾಸಕರು ಮಾಜಿ ಶಾಸಕರು, ಕಾಂಗ್ರೆಸ್ ಪಕ್ಷದ ಮುಖಂಡರು, ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರು, ಭಾಗವಹಿಸಬೇಕು.

ಮಹಾತ್ಮಾಗಾಂಧಿ ಹೆಸರನ್ನು ಬದಲಾವಣೆ ಮಾಡಿ ವಿಜಿ ರಾಮಜಿ ಎಂದು ಹೆಸರಿಡಲು ಮುಂದಾಗಿದ್ದು, ಮತ್ತು ತಾಲೂಕಿನ ಕೇಂದ್ರ ಸರ್ಕಾರ ಸೂಚಿಸಿದ ಗ್ರಾಮ ಪಂಚಾಯತಿಗಳಲ್ಲಿ ಮಾತ್ರ ಕೆಲಸ ಮಾಡಲಾಗುತ್ತಿದೆ. 60 ದಿನಕ್ಕೆ ಕೆಲಸವನ್ನು ನಿಗದಿಗೊಳಿಸಿ ಗುತ್ತಿಗೆದಾರರ ಮೂಲಕ ಕೆಲಸವನ್ನು ಮಾಡಿಸುವ ಹುನ್ನಾರ ನಡೆದಿದೆ. ಇದರ ಕುರಿತು ಪ್ರತಿಭಟಿಸುವ ಕೆಲಸ ಕಾಂಗ್ರೆಸ್ ಪಕ್ಷ ಮಾಡುತ್ತಿದೆ ಎಂದರು. ಈ ವೇಳೆ: ಮುಖಂಡರಾದ ಎನ್.ಅಮರೇಶ, ಅಶೋಕ ಉಮಲೂಟಿ, ಖಾಜಿ ಮಲ್ಲಿಕ್, ಹನುಮೇಶ ನಾಯಕ, ಬಿ.ಎಚ್.ನಾಯಕ ಇದ್ದರು.

# ನೂತನ ಶ್ರೀ ಗಿರಿ ಬಸವೇಶ್ವರ್ ಸಹಕಾರಿ ಉದ್ಘಾಟನೆ



ನೈಜ್ಯ ದೆಸೆ ನ್ಯೂಸ್

**ವಟಗಲ್: ಗ್ರಾಮದಲ್ಲಿ ನೂತನ ಶ್ರೀ ಗಿರಿ ಬಸವೇಶ್ವರ್ ಸಹಕಾರಿ ಉದ್ಘಾಟನೆ ಪಟ್ಟಣ ಸಮಿಪ ವಟಗಲ್ ಗ್ರಾಮದಲ್ಲಿ ನೂತನವಾಗಿ ಶ್ರೀ ಗಿರಿಬಸವೇಶ್ವರ ಸಹಕಾರಿ ಸಂಘದ ಉದ್ಘಾಟನೆಯನ್ನು ಮಾಡಲಾಯಿತು.**

ಸ್ವಾಮಿ ವಿವೇಕಾನಂದ ಜಯಂತಿ ಆಚರಿಸುವ ಮೂಲಕ ನೂತನ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಿವಕುಮಾರ್ ಗೌಡ ಪಾಟೀಲ್ ಮಲ್ಲನಗೌಡ ಪಾಟೀಲ್ ಮಲ್ಲಿಕಾರ್ಜುನ್ ಕಡಬುರ ಶರಣಪ್ಪ ಲೀಡರ್ ಪಂಪಪತಿ ಬಲವಂತರಾಯ ಗೌಡ ಬಸವ ಸನಾಬಾಳ್ ಬಸನಗೌಡ ಬಂಕಲಾದೊಡ್ಡಿ ಕಾಶೀನಾಥ್ ಉಡ್ಬಾಲ್ ನಾಗಪ್ಪ ಕಡಬುರ ಅಮರೇಶ್ ಸ್ವಾಮಿ ಶಿವರಾಜಪ್ಪ ಗೌಡ ಉಮಾಪತಿ ಗೌಡ ಶಿವಪುತ್ರಪ್ಪ ಸೇರಿದಂತೆ ಗ್ರಾಮದ ಪ್ರಮುಖರು ಇದ್ದರು.

# ಮಸ್ಕಿಯಲ್ಲಿ ಶಾಸಕ ಆರ್ ಬಸನಗೌಡ ಅಧ್ಯಕ್ಷತೆಯಲ್ಲಿ ರಾಯಚೂರು ಉತ್ಸವ ಪೂರ್ವಭಾವಿ ಸಭೆ

## ಮಸ್ಕಿ: ರಾಯಚೂರು ಉತ್ಸವದಲ್ಲಿ ಸ್ಥಳೀಯ ಕಲಾವಿದರಿಗೆ ಆದ್ಯತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಉತ್ಸವ ಜಾಗೃತಿ ಮೂಡಿಸಿ: ಆರ್. ಬಸನಗೌಡ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ನಮ್ಮ ಜಿಲ್ಲೆಯಲ್ಲಿ ಇದೆ ಮೊದಲ ಬಾರಿಗೆ ನಡೆಯುತ್ತಿರುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಬಗ್ಗೆ ಗ್ರಾಮ ಪಂಚಾಯಿತಿ ಪಟ್ಟದಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಖಾದಿ ಗ್ರಾಮೋದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್.ಬಸನಗೌಡ ತುರವಿಹಾಳ ಹೇಳಿದರು.**

ಪಟ್ಟಣದ ತಾ.ಪಂ ಸಭಾಂಗಣದಲ್ಲಿ ಶಾಸಕರ ನೇತೃತ್ವದಲ್ಲಿ ಬುಧವಾರ ನಡೆದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಇದೇ ಮೊದಲು ಬಾರಿಗೆ ಜ. 29 ರಿಂದ 31ರ ವರೆಗೆ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಈ ಉತ್ಸವಕ್ಕೆ ಬೇರೆ ರಾಜ್ಯ ಮತ್ತು ಜಿಲ್ಲೆಗಳಿಂದ ಜನರು ಆಗಮಿಸಲಿದ್ದಾರೆ. ಆದ್ದರಿಂದ ಈ ಉತ್ಸವವನ್ನು ಅರ್ತಪೂರ್ಣವಾಗಿ ಮತ್ತು ಕ್ಷೇತ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಬೇಕೆಂದರು. ಉತ್ಸವ





ಬಗ್ಗೆ ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾ.ಪಂ ಅಧಿಕಾರಿಗಳು ಪ್ರಚಾರ ಮಾಡುವುದರ ಜತೆಗೆ ವಿವಿಧ ಕ್ರೀಡಾಕೂಟ ಸೇ-ರಿದಂತೆ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರು ಭಾಗವಹಿಸಲು ಮಾಹಿತಿ ನೀಡಬೇಕೆಂದು ಹೇಳಿದರು.

ಪ್ರಾಸ್ತವಿಕವಾಗಿ ತಹಸೀಲ್ದಾರ್ ಮಂಜುನಾಥ ಭೋಗಾವತಿ ಮಾತನಾಡಿ ಎಡೆದೊರೆ ನಾಡುರಾಯಚೂರು ಜಿಲ್ಲಾ ಉತ್ಸವದಲ್ಲಿ ಕೃಷಿಮೇಳ, ಆಹಾರ ಮೇಳ, ಕೈಗಾರಿಕೆ , ಕರಕುಶಲ, ಪುಸ್ತಕ ಮಳಿಗೆಗಳ ಪ್ರದರ್ಶನ ಜತೆಗೆ ವಿವಿಧ ಗ್ರಾಮೀಣ ಕ್ರೀಡಾಕೂಟಗಳನ್ನು ಏರ್ಪಡಿಸಲಾಗಿದ್ದು, ಸ್ಥಳೀಯರು ಭಾಗವಹಿಸಬೇಕೆಂದರು. ನಂತರ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ ಯಾದವ, ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಸರಕಾರಿ ನೌಕರರ ಸಂಘದ ಅಧ್ಯಕ್ಷ ಪಂಪಾಪತಿ ಹೂಗಾರ ಮಾತನಾಡಿದರು. ಸ್ಥಳೀಯ ಕಲಾವಿದ ವಿಠ್ಠಲ್ ಬಸ್ಸಾಪೂರು ಮಾತನಾಡಿ ರಾಯಚೂರು ಉತ್ಸವದಲ್ಲಿ ನಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆಯ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಾಗ ಶಾಸಕರು ಸ್ಥಳೀಯರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಯಾವ ವಿಭಾಗದಲ್ಲಿ ಕಲೆಯನ್ನು ಪ್ರದರ್ಶಿಸುತ್ತಿರಿ ಅಂತ ಹೆಸರು ನೊಂದಾಯಿಸಲು ತಿಳಿಸಿದರು. ನಂತರ ಅಶೋಕ ಮುರಾರಿ ಮಾತನಾಡಿ ಉತ್ಸವದಲ್ಲಿ ಎನ್‌ಕೆಆರ್‌ಟಿಸಿ ಲೋಗೊ ಹಾಕಿರುವುದು ಸಂತೋಷದ ವಿಷಯ ಅದರ ಜತೆಗೆ ಅಶೋಕ ಶಿಲಾಶಾಸನದ ಪೂರ್ಣ ಮಾಹಿತಿ ಇರುವ ಫಲಕವನ್ನು ಅಳವಡಿಸಬೇಕು ಮತ್ತು ಉತ್ಸವಕ್ಕೆ ತೆರಳಲು ಸಾರಿಗೆ ವ್ಯವಸ್ಥೆ ಕಲ್ಪಿಸಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ತಾಲೂಕಾಧಿಕಾರಿಗಳು, ಗ್ಯಾರಂಟಿ ಸಮಿತಿಯ ಅಧ್ಯಕ್ಷ ಮೈಬುಸಾಬ ಮುದ್ದಾಪೂರು ಸೇರಿದಂತೆ ವಿವಿಧ ಪಕ್ಷದ ಮುಖಂಡರು, ನಾನಾ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿದ್ದರು.

ಗ್ರಂಥಾಲಯಕ್ಕೆ ಪುಸ್ತಕ ವಿತರಣೆ: ತಾಲೂಕಿನ 21 ಗ್ರಾ.ಪಂ ವ್ಯಾಪ್ತಿಯ ಮತ್ತು ನೂತನ 4 ಗ್ರಂಥಾಲಯಗಳಿಗೆ ತಾ.ಪಂ ವತಿಯಿಂದ ಗ್ರಾಮೀಣದ ಭಾಗದವರಿಗೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಪುಸ್ತಕಗಳನ್ನು ಗ್ರಂಥಾಪಾಲಕರಿಗೆ ನೀಡಿದರು.

### ಮುಂದಿನ ದಿನಗಳಲ್ಲಿ ಅಶೋಕ ಉತ್ಸವ ಭರವಸೆ

**ದೇಶಕ್ಕೆ ಮಸ್ಕಿಯ ಹೆಸರನ್ನು ಪರಿಚಯಸಿದ ಮತ್ತು ಸಾಮ್ರಾಟ್ ಅಶೋಕನೇ, ದೇವಾನಂಪ್ರಿಯಾ ಅಶೋಕ ಎಂದು ತಿಳಿಸಿದ ಶಿಲಾಶಾಸನ ಮಸ್ಕಿಯಲ್ಲಿರುವದರಿಂದ ಮುಂದಿನ ದಿನಗಳಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿ ಮಸ್ಕಿಯಲ್ಲೇ ಅಶೋಕ ಉತ್ಸವವನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ಶಾಸಕ ಆರ್.ಬಸನಗೌಡ ತುರವಿಹಾಳ ಭರವಸೆ ನೀಡಿದ್ದಾರೆ.**

### ಸ್ಪರ್ಧಾತ್ಮಕ ಪರೀಕ್ಷೆಗೆ ಪುಸ್ತಕ ವಿತರಣೆ:

**ಮಧ್ಯ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶಾಸಕ ಆರ್ ಬಸನಗೌಡ ತುರುವಿಹಾಳವರು ಮಸ್ಕಿ ತಾಲೂಕಿನ 21 ಗ್ರಾಮ ಪಂಚಾಯಿತಿಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗಲೆಂದು ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿ ಪುಸ್ತಕಗಳನ್ನು ವಿತರಿಸಿದರು.**

## ಶಿಕ್ಷಣ ಮಾರ್ಗದರ್ಶಿ ವಿಶೇಷ


### ಬಿ.ಎಸ್ಸಿ. ಎಂಎಲ್‌ಟಿ

BSc MLT (ಮೆಡಿಕಲ್ ಲ್ಯಾಬ್ ಟೆಕ್ನಾಲಜಿ) ಎಂದರೆ ರೋಗಗಳನ್ನು ಪತ್ತೆಹಚ್ಚಲು, ಚಿಕಿತ್ಸೆ ನೀಡಲು ಮತ್ತು ತಡೆಗಟ್ಟಲು ಅಗತ್ಯವಿರುವ ರಕ್ತ, ಮೂತ್ರದಂತಹ ದೇಹದ ಮಾದರಿಗಳ ಪರೀಕ್ಷೆಗಳನ್ನು ಮಾಡುವ ತರಬೇತಿ ನೀಡುವ ಪದವಿ ಕೋರ್ಸ್ ಆಗಿದೆ, ಇದು 12ನೇ ತರಗತಿಯಲ್ಲಿ ವಿಜ್ಞಾನ (PCB/PCM) ಪೂರೈಸಿದವರಿಗೆ ಅರ್ಹತೆ, ಮತ್ತು ಇದು ಪ್ರಯೋಗಾಲಯ ಉಪಕರಣಗಳ ನಿರ್ವಹಣೆ ಹಾಗೂ ರೋಗನಿರ್ಣಯದ ಕೌಶಲ್ಯಗಳನ್ನು ಬೆಳೆಸುತ್ತದೆ. ಈ ಕೋರ್ಸ್ ನಂತರ ಆಸ್ಪತ್ರೆಗಳು, ಸಂಶೋಧನಾ ಕೇಂದ್ರಗಳು, ರಕ್ತದಾನ ಕೇಂದ್ರಗಳು ಮತ್ತು ವಿಮೆಯಂತಹ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳಿವೆ. ಕೋರ್ಸ್ ವಿವರಗಳು ಅರ್ಹತೆ: ವಿಜ್ಞಾನ ವಿಷಯಗಳೊಂದಿಗೆ 12ನೇ ತರಗತಿ ಪಾಸಾಗಿರಬೇಕು (ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ/ಗಣಿತ). ಕೋರ್ಸ್: ಅರೆ-ವೈದ್ಯಕೀಯ ಪದವಿ ಕೋರ್ಸ್, ರೋಗನಿರ್ಣಯ ಪರೀಕ್ಷೆಗಳ ಮೇಲೆ ಕೇಂದ್ರೀಕರಿಸುತ್ತದೆ. ಕಲಿಕೆ: ಮಾನವ ಅಂಗರಚನಾಶಾಸ್ತ್ರ, ಜೀವರಸಾಯನಶಾಸ್ತ್ರ, ಮಾನವ ಶರೀರಶಾಸ್ತ್ರ, ಪ್ರಯೋಗಾಲಯ ಉಪಕರಣಗಳ ಬಳಕೆ ಮುಂತಾದ ವಿಷಯಗಳನ್ನು ಒಳಗೊಂಡಿದೆ. ಪ್ರಮುಖ ಉದ್ಯೋಗ ಕ್ಷೇತ್ರಗಳು ಆಸ್ಪತ್ರೆಗಳು ಮತ್ತು ಕ್ಲಿನಿಕ್ಗಳು: ರೋಗನಿರ್ಣಯ ಪರೀಕ್ಷೆಗಳನ್ನು ನಿರ್ವಹಿಸುವುದು. ಸಂಶೋಧನಾ ಪ್ರಯೋಗಾಲಯಗಳು: ಜೈವಿಕ ತಂತ್ರಜ್ಞಾನ ಮತ್ತು ಇತರ ಸಂಶೋಧನೆಗಳಲ್ಲಿ ಭಾಗವಹಿಸುವುದು. ರಕ್ತದಾನ ಕೇಂದ್ರಗಳು: ರಕ್ತದ ಮಾದರಿಗಳನ್ನು ವಿಶ್ಲೇಷಿಸುವುದು. ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು: ಬೋಧನೆ ಮತ್ತು ಸಂಶೋಧನೆ. ಇತರ: ಉತ್ಪನ್ನ ಅಭಿವೃದ್ಧಿ, ಮಾರ್ಕೆಟಿಂಗ್, ವಿಮೆ ಮತ್ತು ಮಿಲಿಟರಿ ಸೇವೆಗಳು. ಪ್ರಯೋಜನಗಳು ವೃತ್ತಿ ಬೆಳವಣಿಗೆ: ವೈದ್ಯಕೀಯ ಕ್ಷೇತ್ರದಲ್ಲಿ ಒಂದು ಪ್ರಮುಖ ಮತ್ತು ಬೇಡಿಕೆಯ ವೃತ್ತಿ. ವೈವಿಧ್ಯಮಯ ಉದ್ಯೋಗಗಳು: ಆಸ್ಪತ್ರೆಗಳಿಂದ ಸಂಶೋಧನೆಗಳವರೆಗೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅವಕಾಶ. ಬಿ.ಎಸ್ಸಿ. ಎಂಎಲ್‌ಟಿ (ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞಾನ): ನಿಖರತೆಯತ್ತ ನಿಮ್ಮ ವೃತ್ತಿಜೀವನದ ಹಾದಿಯಲ್ಲಿ ಹೆಜ್ಜೆ ಹಾಕಿ ಮಾನವ ದೇಹದ ಆಂತರಿಕ ಕಾರ್ಯಚಟುವಟಿಕೆಗಳು ನಂಬಲಾಗದಷ್ಟು ಆಕರ್ಷಕವಾಗಿವೆ, ಮತ್ತು ನಮ್ಮ ಒಟ್ಟಾರೆ ಯೋಗಕ್ಷೇಮವನ್ನು ಖಚಿತಪಡಿಸುವುದು ಉತ್ತಮ ರಕ್ತದ ಕೆಲಸ. ಆರೋಗ್ಯಕರ ದೇಹವನ್ನು ಕಾಪಾಡಿಕೊಳ್ಳುವಲ್ಲಿ ದೇಹದ ದ್ರವಗಳ ಪಾತ್ರದ ಬಗ್ಗೆ ನೀವು ಆಶ್ಚರ್ಯ ಪಡುತ್ತಿದ್ದರೆ, ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞಾನ (MLT) ನಿಮ್ಮ ಕರೆಯಾಗಬಹುದು.ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞಾನದಲ್ಲಿನ ವೃತ್ತಿಜೀವನವು ಆರೋಗ್ಯ ರಕ್ಷಣೆ ಮತ್ತು ವೈಜ್ಞಾನಿಕ ವಿಚಾರಣೆಯ ಬಗ್ಗೆ ಆಸಕ್ತಿ ಹೊಂದಿರುವವರಿಗೆ ತೃಪ್ತಿಕರ ಮತ್ತು ಬೌದ್ಧಿಕವಾಗಿ ಉತ್ತೇಜಕ ಮಾರ್ಗವನ್ನು ನೀಡುತ್ತದೆ.

# ತಾಲೂಕಾಡಳಿತದಿಂದ ಶ್ರೀ ಸಿದ್ದರಾಮೇಶ್ವರ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ತಹಸಿಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ತಾಲೂಕ ಆಡಳಿತ ಹಾಗೂ ಭೋವಿ ಸಮಾಜದ ಸಹಯೋಗದಲ್ಲಿ ಶಿವಯೋಗಿ ಶ್ರೀ ಸಿದ್ದರಾಮೇಶ್ವರ ಅವರ 853ನೇ ಜಯಂತಿಯನ್ನು ಬುಧವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.**





ತಹಸಿಲ್ದಾರ್ ಡಾ.ವಿನಯಾ ಹೂಗಾರ ಶ್ರೀ ಸಿದ್ದರಾಮೇಶ್ವರ ಅವರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ ಪುಷ್ಪ ನಮನ ಸಲ್ಲಿಸಿ ತಾಲೂಕಿನ ಜನತೆಗೆ ಜಯಂತಿಯ ಶುಭಾಶಯ ತಿಳಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ ಮಹಾಪುರುಷರ, ಶರಣರ ಹಾಗೂ ದಾರ್ಶನಿಕರ ಕೇವಲ ಜಯಂತಿಗಳನ್ನು ಆಚರಿಸಿದರೆ ಸಾಲದು ಅವರ ಬದುಕಿನ ಆದರ್ಶಗಳನ್ನು ಜೀವನಕ್ಕೆ ಅಳವಡಿಸಿಕೊಳ್ಳುವ ಅಗತ್ಯ ಇದೆ ಎಂದು ಹೇಳಿದರು. ಕ್ಷೇತ್ರ ಸಮನ್ವಯಾಧಿಕಾರಿ ಆರ್ ಬಿ ದಮ್ಮೂರ ಮತ ಮಾತನಾಡಿ ಶಿವಯೋಗಿ ಸಿದ್ದರಾಮೇಶ್ವರ ಅವರು ಕೆಟ್ಟುಹೋದ ಸಮಾಜವನ್ನು ಶ್ರೇಷ್ಠ ಚಿಂತನೆಗಳ ಮೂಲಕ ಸರಿ ದಾರಿಗೆ ತರುವ ಕೆಲಸ ಮಾಡಿದರು.

ನಾವು ಕೇವಲ ಅವರ ಭಾವಚಿತ್ರದ ಪೂಜೆ ಮಾಡಿದರೆ ಸಾಲದು ಅವರ ಜೀವನದ ಚಿಂತನೆಗಳನ್ನೂ ಅರಿಯುವ ಕೆಲಸ ಮಾಡಬೇಕಾಗಿದೆ ಎಂದರು. ಪ್ರೌಢಶಾಲೆ ಶಿಕ್ಷಕರ ಸಂಘದ ಉಪಾಧ್ಯಕ್ಷ ಆನಂದ ಕಟ್ಟಿಮನಿ ಮಾತನಾಡಿ ತಮ್ಮ ಅಪಾರ ಸೇವಾ ಕಾರ್ಯಗಳಿಂದಾಗಿ ಕಾಯಕಯೋಗಿ ಎಂದೆನಿಸಿಕೊಂಡು ಶಿವಯೋಗಿ ಸಿದ್ದರಾಮೇಶ್ವರ ಅವರು ವಚನ ಕ್ರಾಂತಿಗೆ ಸಾಕಷ್ಟು ಶ್ರಮಿಸಿದವರಾಗಿದ್ದಾರೆ ಎಂದರು. ವೇದಿಕೆ ಕಾರ್ಯಕ್ರಮ ಮುನ್ನ ಪಟ್ಟಣದ ಬಸ್ ನಿಲ್ದಾಣ ಹತ್ತಿರವಿರುವ ಶ್ರೀ ಸಿದ್ದರಾಮೇಶ್ವರ ವೃತ್ತದಲ್ಲಿ ಅವರ ಭಾವಚಿತ್ರಕ್ಕೆ ಸಮಾಜದ ವತಿಯಿಂದ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಭೋವಿ ಸಮಾಜದ ತಾಲೂಕ ಅಧ್ಯಕ್ಷ ದ್ಯಾವಪ್ಪ ಕೂಚಬಾಳ, ನಗರ ಅಧ್ಯಕ್ಷ ಹಣಮಂತ ಕಟ್ಟಿಮನಿ, ಉಪಾಧ್ಯಕ್ಷ ದುರ್ಗಪ್ಪ ಕುಲಕರ್ಣಿ, ಗೌರವ ಅಧ್ಯಕ್ಷ ಭೀಮಣ್ಣ ಕಟ್ಟಿಮನಿ, ಯುವ ಮುಖಂಡ ಶ್ರೀನಿವಾಸ್ ಕುಲಕರ್ಣಿ, ಪ್ರಮುಖರಾದ ಎಚ್ ಎನ್ ಕಟ್ಟಿಮನಿ, ದುರ್ಗಪ್ಪ ಕಾರ್ಕೂರ, ಮುದಕಪ್ಪ ಢವಳಗಿ, ಹುಲಿಗೆಪ್ಪ ಕಟ್ಟಿಮನಿ ನಾಗಪ್ಪ ಬಳವಾಟ, ಬಸವರಾಜ ಎಚ್.ಕಟ್ಟಿಮನಿ, ಭೀಮಸಿ ಕಾರ್ಕೂರ, ಶ್ರೀಕಾಂತ ಚಿಂಚೋಳಿ, ಪ್ರಕಾಶ ಕೂಚಬಾಳ, ಪರುಶರಾಮ ನಾಲತವಾಡ, ನ್ಯಾಯವಾದಿ ಕಾರ್ತಿಕ್ ಕಟ್ಟಿಮನಿ, ರಾಮಣ್ಣ ಕಟ್ಟಿಮನಿ, ಸಂಜೀವಪ್ಪ ಬರದೇನಾಳ, ಪರಶುರಾಮ್ ಹಗರಟಗಿ, ವೆಂಕಟೇಶ ಹಗರಟಗಿ, ದೇವಪ್ಪ ಬಂಡಿವಡ್ಡರ, ಅನಿಲ್ ಕಟ್ಟಿಮನಿ, ಹುಲಿಗೆಪ್ಪ ಕಟ್ಟಿಮನಿ, ರಾಜು ಹಾದಿಮನಿ, ಕಾಶಿನಾಥ ಕಟ್ಟಿಮನಿ ಹಾಗೂ ತಾಲೂಕ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ವರ್ಷದ ಮೊದಲ ಹಬ್ಬ, ಮಕರ ಸಂಕ್ರಾಂತಿ, ನಾಡಿನ ಜನತೆ ಪವಿತ್ರ ತೀರ್ಥ ಸ್ನಾನ



ನೈಜ್ಯ ದೆಸೆ ನ್ಯೂಸ್

**ನಮ್ಮ ಭಾರತೀಯ ಸನಾತನ ಸಂಸ್ಕೃತಿಯಲ್ಲಿ ಹಬ್ಬಗಳು ವಿಶೇಷ ಮಹತ್ವವನ್ನು ಪಡೆದಿವೆ. ಅದೇ ರೀತಿ ಹಿಂದುಗಳ ಹಬ್ಬಗಳಲ್ಲಿ ಮಕರ ಸಂಕ್ರಾಂತಿಗೆ ಪ್ರಾಮುಖ್ಯತೆ ಇದೆ. ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸುವ ದಿನವೇ ಮಕರ ಸಂಕ್ರಾಂತಿ.**

ನೇಸರನು ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಚಲಿಸುವ ದಿನವೇ ಮಕರ ಸಂಕ್ರಾಂತಿ ಈ ದಿನವನ್ನು ಉತ್ತರಾಯಣ ಪುಣ್ಯ ಕಾಲವೆಂದು ಕೂಡ ಕರೆಯುತ್ತಾರೆ. ಜನವರಿಯಿಂದ ವರುಷ ಆರಂಭದ ಮೊದಲ ಹಬ್ಬವೇ ಮಕರ ಸಂಕ್ರಾಂತಿ, ಜನವರಿ ತಿಂಗಳ 14ರಂದು ಅಥವಾ ಕೆಲವೊಮ್ಮೆ ಮಾತ್ರ 15ರಂದು ಮಕರ ಸಂಕ್ರಮಣವನ್ನು ಆಚರಿಸುತ್ತಾರೆ.

ಉತ್ತರಾಯಣದಿಂದ ಬೆಳಕು ಹೆಚ್ಚಾಗುವ ಕಾಲವಾಗಿದೆ ವೈಜ್ಞಾನಿಕವಾಗಿ ಸೂರ್ಯನ ಕಿರಣಗಳಲ್ಲಿ ವಿಟಮಿನ್ ಡಿ ಇದೆ. ಚಳಿಗಾಲದಲ್ಲಿ ಮನುಷ್ಯನ ದೇಹದ ಚರ್ಮವು ಒಡೆದು ಹೋಗಿರುತ್ತದೆ. ಇದರಿಂದ ದೇಹಕ್ಕೆ ಎಣ್ಣೆ ಅಂಶವಿರುವ ಎಳ್ಳನ್ನು ಪುಡಿ ಮಾಡಿ ಅದರೊಂದಿಗೆ ಅರಿಶಿನವನ್ನು ಬೆರೆಸಿ ದೇಹಕ್ಕೆ ಹಚ್ಚಿಕೊಂಡು ಸ್ನಾನವನ್ನು ಮಾಡುತ್ತಾರೆ ಎಳ್ಳು ಮತ್ತು ಕೊಬ್ಬರಿ ಇವೆರಡರಲ್ಲಿ ಎಣ್ಣೆ ಅಂಶವಿರುವುದರಿಂದ ಇವು ಶೀತ ವಾತಾವನ್ನು ದೂರ ಮಾಡುತ್ತದೆ.

ಅದೇ ರೀತಿ ಚಳಿಗಾಲದಲ್ಲಿ ಪಚನ ಶಕ್ತಿ ಕಡಿಮೆಯಾಗಿರುವುದರಿಂದ ಈ ವೇಳೆಯಲ್ಲಿ ತಿನ್ನುವ ಕಬ್ಬು ಪಚನ ಕ್ರಿಯೆಗೆ ಸಹಾಯ ಮಾಡುತ್ತದೆ. ಸಂಕ್ರಾಂತಿಯು ರೈತರ ಹಬ್ಬವಾಗಿದೆ ರೈತರು ತಾವು ಬೆಳೆದ ಬೆಳೆಗಳನ್ನು ಕಟಾವು ಮಾಡಿ ಅಕ್ಕಿಯಿಂದ ಪೊಂಗಲ್ ಎಂಬ ಪದಾರ್ಥವನ್ನು ತಯಾರು ಮಾಡಿ ಸೂರ್ಯನಿಗೆ ನೈವೇದ್ಯವನ್ನು ಅರ್ಪಿಸುತ್ತಾರೆ ರೈತಾಪಿ ವರ್ಗವು ತಮ್ಮ ಜೊತೆಗಿದ್ದು ತಮ್ಮ ಕೃಷಿ ಚಟುವಟಿಕೆಗಳಲ್ಲಿ ತಮಗೆ ಸಹಾಯಕವಾಗಿರುವ ತಮ್ಮ ದನ ಕರುಗಳ ಮೈಯನ್ನು ತೊಳೆದು ಅವುಗಳಿಗೆ ಶೃಂಗಾರ ಮಾಡಿ ಕಿಚ್ಚು ಹಾಯಿಸುತ್ತಾರೆ.

ಕಿಚ್ಚು ಹಾಯಿಸುವ ಉದ್ದೇಶವಿಷ್ಟೇ ದನ ಕರುಗಳ ಮೈಗೆ ಅಂಟಿಕೊಂಡಿರುವ ಕೀಟಗಳು ಇದರಿಂದ ನಾಶವಾಗುತ್ತದೆ. ಸಂಕ್ರಾಂತಿಯ ಶುಭ ಸಂದರ್ಭದಲ್ಲಿ ಜನರು ಪುಣ್ಯಕ್ಷೇತ್ರಗಳಿಗೆ ಹೋಗಿ ಪುಣ್ಯ ನದಿಗಳಲ್ಲಿ ಸ್ನಾನ ಮಾಡಿ ದೇವರ ದರ್ಶನವನ್ನು ಪಡೆದು ಕೃತಾರ್ಥರಾಗುತ್ತಾರೆ. ತಮಗೂ ತಮ್ಮ ಕುಟುಂಬ ವರ್ಗಕ್ಕೂ ಉತ್ತರಾಯಣ ಪುಣ್ಯಕಾಲದ ಶುಭಾಶಯಗಳು.

ಸಿದ್ದಾರ್ಥ ಪ್ರೊ. ಪಾಟೀಲ್ ಹಾಲಾಪೂರ

# ಅಂಬಿಗರ ಚೌಡಯ್ಯ ಜಯಂತಿ ಆಚರಣೆಗೆ ಸಿದ್ಧತೆಯಾಗಲಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 14 (ಕರ್ನಾಟಕ ವಾರ್ತೆ): ಜಿಲ್ಲಾಡಳಿತದಿಂದ ಜನವರಿ 21ರಂದು ಅಂಬಿಗರ ಚೌಡಯ್ಯ ಜಯಂತಿ ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳ ಕಚೇರಿಯ ತಹಶಿಲ್ದಾರ್ ಜಗದೀಶ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.**



ಅವರು ಇತ್ತೀಚೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂಬಿಗರ ಚೌಡಯ್ಯ ಜಯಂತಿ ಆಚರಣೆಯ ಪೂರ್ವಭಾವಿ ಸಭೆ ಉದ್ದೇಶಿಸಿ ಅವರು ಮಾತನಾಡಿದರು. ಜ.21ರಂದು ಜಿಲ್ಲೆಯ ಎಲ್ಲ ತಾಲೂಕುಗಳು, ಶಾಲಾ-ಕಾಲೇಜುಗಳಲ್ಲಿ ಆಚರಿಸಲಾಗುವುದು. ವಿವಿಧ ಇಲಾಖೆಗಳು ಜಯಂತಿ ಆಚರಣೆಗೆ ಸಹಕಾರ ನೀಡುವ ಜತೆಗೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಬೇಕು. ಅಂದು ಬೆಳಗ್ಗೆ 09 ಗಂಟೆಗೆ ನಗರದ ಬಿ.ಆರ್.ಬಿ ಸರ್ಕಲ್ ನಿಂದ ಅಂಬಿಗರ ಚೌಡಯ್ಯ ಅವರ ಭಾವಚಿತ್ರದ ಮೆರವಣಿಗೆ ನಡೆಯಲಿದೆ. 11 ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಇರಲಿದೆ ಎಂದರು. ವೇದಿಕೆಯನ್ನು ಅಚ್ಚುಕಟ್ಟಾಗಿ ಅಂಲಕಾರ ಮಾಡಬೇಕು. ಗಣ್ಯರಿಗೆ ಆಮಂತ್ರಣ, ಪ್ರತಿಭಾನಿತ್ವರಿಗೆ ಸನ್ಮಾನ, ಉಪನ್ಯಾಸ ಸೇರಿದಂತೆ ಎಲ್ಲವೂ ಅಚ್ಚುಕಟ್ಟಾಗಿರಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉತ್ತರಾದೇವಿ, ಸಮುದಾಯದ ಜಿಲ್ಲಾಧ್ಯಕ್ಷ ಕೆ.ಶಾಂತಪ್ಪ, ಸಮಾಜದ ಮುಖಂಡರಾದ ಹೊನ್ನಪ್ಪ, ಶ್ರೀನಿವಾಸ್, ಪಿ.ಪರಮೇಶ್, ಕೆ.ತಿಮ್ಮಪ್ಪ, ಪಿ.ಈರೇಶ, ಈರೇಶ ಜಾಲಗೇರಿ, ಕೆ.ನರಸಿಂಹ, ಇ.ಶಿವರಾಮ್, ಹನುಮಂತು ಕಡಗೋಳ ಸೇರಿದಂತೆ ಇತರರು ಇದ್ದರು.

# ತಾಲೂಕು ಆಡಳಿತದಿಂದ ಕಾಯಕಯೋಗಿ ಶ್ರೀಸಿದ್ದರಾಮೇಶ್ವರರ 854 ನೇ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತ ವತಿಯಿಂದ ನಡೆದ ಕಾಯಕಯೋಗಿ ಶ್ರೀಸಿದ್ದರಾಮೇಶ್ವರರ 854 ನೇ ಜಯಂತಿ ಕಾರ್ಯಕ್ರಮವನ್ನು ಶ್ರೀಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಿಸಿ ತಹಸೀಲ್ದಾರ್ ಭೀಮರಾಯ ಬಿ. ರಾಮಸಮುದ್ರ ಮಾತನಾಡಿ 12ನೇ ಶಾತಮಾನದಲ್ಲಿ ಬಸವಾದಿ ಶರಣರ ಪ್ರಭವದಿಂದ ಶ್ರೀಸಿದ್ದರಾಮೇಶ್ವರರು ತಮ್ಮ ಜೀವನದಲ್ಲಿ ಕಾಯಕ ದಾಸೋಹ, ತತ್ವಗಳನ್ನು ಅಳವಡಿಸಿಕೊಂಡು ಕೆರೆ ಕಟ್ಟೆಗಳನ್ನು, ಸಾಮೂಹಿಕ ವಿವಾಹಗಳು ಸೇರಿದಂತೆ ಅನೇಕ ಸಾಮಾಜಿಕ ಸೇವಾ ಕಾರ್ಯಗಳನ್ನು ಕೈಗೊಂಡಿರುವದನ್ನು**



ಕಾಣಬಹುದು ಶ್ರೀ ಸಿದ್ದರಾಮೇಶ್ವರರ ವಚನಗಳಲ್ಲಿನ ತತ್ವ ಅದರ್ಶಗಳನ್ನು ಪ್ರತಿಯೊಬ್ಬರು ಕೂಡ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ನಿವೃತ್ತ ಶಿಕ್ಷಕ ಯಲ್ಲಪ್ಪ ನಿಲೋಗಲ್ ಶಿವಯೋಗಿ ಶ್ರೀಸಿದ್ದರಾಮೇಶ್ವರರ ಕುರಿತು ವಿಶೇಷ ಉಪನ್ಯಾಸ ನೀಡಿ ಶಿವಯೋಗಿ ಸಿದ್ದರಾಮೇಶ್ವರರು 68 ಸಾವಿರ ವಚನಗಳನ್ನು ರಚಿಸಿದ್ದು ಅವುಗಳಲ್ಲಿ 1,679 ವಚನಗಳು ಮಾತ್ರ ಲಭ್ಯವಿವೆ. ಇಂತಹ ಮಹಾಪುರುಷರನ ಆರಾಧಕರಾದ ಭೋವಿ ಸಮಾಜ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಪ್ರಗತಿ ಸಾಧಿಸಬೇಕಿದೆ ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ತೋರಿದ ಹನುಮಂತಪ್ಪ ಕೊಟ್ನೆಕಲ್, ಬಸವರಾಜ ,ಮಲ್ಲಿಕಾರ್ಜುನ ಪೂಜಾರಿ, ಬಸವರಾಜ ಭಜಂತ್ರಿ, ಬಸ್ಸಪ್ಪ ಮದ್ಲಾಪುರ್‌ರನ್ನು ಸನ್ಮಾನಿಸಿ ಗೌರವಿಸಲಾಯಿತು. ಗ್ರೇಡ್-2 ತಹಸೀಲ್ದಾರ ಅಬ್ದುಲ್ ವಾಹಿದ್ ಭೋವಿ ಸಮಾಜ ಒಕ್ಕೂಟ ಸಮಿತಿ ಅಧ್ಯಕ್ಷ ಆನಂದ ಭೋವಿ ಮಾನ್ವಿ, ಪರಶುರಾಮ ಭಜಂತ್ರಿ ನಕ್ಕುಂದಿ, ಸಂತೋಷಕುಮಾರ, ಕರಿಯಪ್ಪ ಕೋಳಿಕ್ಯಾಂಪ್, ಆನಿಲಕುಮಾರ ಮುದ್ದಂಗುಡ್ಡಿ, ರೇಣುಗೋಪಾಲ ಭೋವಿ, ಹುಲಿಗೆಪ್ಪ ಮಾನ್ವಿ, ಅಮರೇಶ ಕೋಳಿಕ್ಯಾಂಪ್, ಈರಪ್ಪ ಭೋವಿ, ಶಿವಪ್ಪ ಭೋವಿ, ರಮೇಶ್ ಭೋವಿ ಸೇರಿದಂತೆ ಇನ್ನಿತರರು ಇದ್ದರು.

# ಮಸ್ಕಿ :ಶಾಸಕ ಆರ್ ಬಸನಗೌಡ ರಿಂದ ಕಾರ್ಮಿಕರಿಗೆ ಕಿಟ್ ಹಾಗೂ ಗಂಗಾ ಕಲ್ಯಾಣ ಯೋಜನೆ ಫಂಕ್ಷನ್ ವಿತರಣೆ



ನೈಜ್ಯ ದೆಸೆ ನ್ಯೂಸ್

**ಮಸ್ಕಿ: ನನ್ನ ಮತ ಕ್ಷೇತ್ರದಲ್ಲಿ ಬಹುತೇಕ ಪ್ರದೇಶವೂ ಮಳೆಯಾಶ್ರಿತ ಪ್ರದೇಶವನ್ನು ಹಸಿರಾಗಿಸುವ ಸಂಕಲ್ಪ ತೋರಲಾಗಿದೆ ಎಂದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಬಸನಗೌಡ ತುರವಿಹಾಳ ಹೇಳಿದರು.**

ಪಟ್ಟಣದ ಬಸವೇಶ್ವರ ನಗರದಲ್ಲಿರುವ ನಗರ ಯೋಜನಾ ಪ್ರಾಧಿಕಾರದ ಕಛೇರಿಯಲ್ಲಿ ಪಕ್ಕದಲ್ಲಿ ಹಮ್ಮಿಕೊಂಡಿದ್ದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಬೋರ್‌ವೆಲ್ ಸಾಮಾಗ್ರಿಗಳು ಮತ್ತು ಕಾರ್ಮಿಕರಿಗೆ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನಾ ಘೋಷಣೆ ಮಾಡಿದಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದರು. ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಜನಾಂಗದವರಿಗೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯಡಿಯ ಗಂಗಾ ಕಲ್ಯಾಣ ಯೋಜನೆಗೆ ಆಯ್ಕೆಯಾದ ಫಲಾನುಭವಿಗಳಿಗೆ ಬೋರ್‌ವೆಲ್ ಸಾಮಾಗ್ರಿಗಳನ್ನು ವಿತರಿಸಲಾಗಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರವನ್ನು ಹಸಿರಾಗಿಸುವುದೇ ನನ್ನ ಧ್ಯೇಯವಾಗಿದೆ ಎಂದು ಹೇಳಿದರು.

ಒಣ ಬೇಸಾಯದ ಪ್ರದೇಶದ ರೈತರ ಅನುಕೂಲಕ್ಕೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡಲಾಗುತ್ತಿದೆ. ಸಣ್ಣ ನೀರಾವರಿ ಇಲಾಖೆಯಿಂದ ಈಗಾಗಲೇ 200 ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ ಅದರಲ್ಲಿ ಶೇಕಡಾ 99%ರಷ್ಟು ಬೋರ್ ಗಳಲ್ಲಿ ನೀರು ಬಿದ್ದಿವೆ. ಎಲ್ಲ ಸಮಾಜದ ರೈತರಿಗೆ ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ಬೋರ್‌ಗಳನ್ನು ಕೊರೆಸಿ ರೈತರು ಗುಳೆ ಹೊಗುವುದನ್ನು ತಪ್ಪಿಸಿ ಕ್ಷೇತ್ರವನ್ನು ಹಸಿರುಕ್ರಾಂತಿ ಮಾಡುವುದೇ ನನ್ನ ಮುಖ್ಯ ಉದ್ದೇಶ ವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕಾರ್ಮಿಕ ಇಲಾಖೆ ವಿವಿಧ ಕಾರ್ಮಿಕರಿಗೆ ಕಾರ್ಮಿಕರ ಕಿಟ್‌ಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಆರ್.ಸಿದ್ದನಗೌಡ ತುರ್ವಿಹಾಳ, ಗ್ಯಾರಂಟಿ ಸಮಿತಿ ಯೋಜನೆ ಅಧ್ಯಕ್ಷ ಮಹಿಬೂಬ್ ಸಾಬ್, ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ನಾಗಭೂಷಣ, ಕಾರ್ಮಿಕರ ಇಲಾಖೆಯ ಅಧಿಕಾರಿ ಶಾಂತಮೂರ್ತಿ, ಬಸ್ಸಪ್ಪ ಜಂಗಮರಳ್ಳಿ, ಕೆಡಿಪಿ ಸದಸ್ಯ ಬಸವಂತಪ್ಪ ಸೇರಿದಂತೆ ಇನ್ನಿತರರಿದ್ದರು.

# ಜಿಲ್ಲಾಡಳಿತದಿಂದ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 14 (ಕರ್ನಾಟಕ ವಾರ್ತೆ): 12ನೇ ಶತಮಾನದಲ್ಲಿದ್ದ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದ ವಚನಕಾರರಲ್ಲಿ ಪ್ರಮುಖರಾದ ಶಿವಯೋಗಿ ಸಿದ್ಧರಾಮೇಶ್ವರ ಅವರ ಜಯಂತಿಯನ್ನು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜನವರಿ 14ರಂದು ಆಚರಣೆ ಮಾಡಲಾಯಿತು.**



ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ ಹಾಗೂ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಸೇರಿದಂತೆ ಇತರೆ ಗಣ್ಯರು ಶಿವಯೋಗಿ ಸಿದ್ಧರಾಮೇಶ್ವರ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಬಳಿಕ ಜ್ಯೋತಿ ಬೆಳೆಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ರಾಯಚೂರು ತಹಸೀಲ್ದಾರ್ ಸುರೇಶ್ ವರ್ಮ, ರಾಯಚೂರು ಮಹಾನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತರಾದ ಸಂತೋಷ ರಾಣಿ, ಸಿಪಿಐಗಳಾದ ಉಮೇಶ ಕಾಂಬಳೆ, ನಾಗರಾಜ್ ಮೇಕ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಸಭೆಯಲ್ಲಿ ಇದ್ದರು.

ಅದ್ದೂರಿ ಮೆರವಣಿಗೆ: ಇದಕ್ಕು ಮೊದಲು ನಗರದ ಆಶಾಪೂರು ರಸ್ತೆಯ ಶಿವಯೋಗಿ ಸಿದ್ಧರಾಮೇಶ್ವರ ವೃತ್ತದಿಂದ ಮೆರವಣಿಗೆಯು ಆರಂಭಗೊಂಡು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಜಿಲ್ಲಾ ರಂಗ ಮಂದಿರಕ್ಕೆ ಬಂದು ಮುಕ್ತಾಯವಾಯಿತು. ಮೆರವಣಿಗೆಗೆ ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಹಾಗೂ ನಗರ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ ಅವರು ಚಾಲನೆ ನೀಡಿದರು. ಈ ವೇಳೆ ರಾಯಚೂರು ಕಿಲ್ಲಾನ ಮಠದ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮೀಜಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು, ತಹಸೀಲ್ದಾರರು ಮತ್ತು ಸಮಾಜದ ಮುಖಂಡರು ಇದ್ದರು.